ಕರ್ನಾಟಕ ಸಂಘ ಮುಂಬಯಿ

Karnataka Sangha Mumbai

(ಸುವರ್ಣ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ)

(Regd. under the Societies Registration Act 1860 & Bombay Public Trust Act. 1950)

92ನೇ ವಾರ್ಷಿಕ ವರದಿ 2025 – 2026



92ST Annual Report 2025-2026

OUR AIMS & OBJECTS

a) To foster Kannada language, literature & Culture;

b) To promote fine arts;

c) To promote friendly relations and a spirit of Co-operation among the Kannada speaking residents of Brihan Mumbai and its environs and strive for their cultural, social and economic advancement;

d) To conduct classes, training camps, workshops, seminars, conferences, exhibition for fostering talent in language, literature, music, dance, drama and arts for the furtherance of the aims & objects mentioned in a) to c) above.

e) To patronize and undertake educational, both academic and technical and social welfare activities for the benefit of Kannadigas and to strive for their intellectual and general welfare.

f) To foster activities designed to promote understanding and cordial relations between Kannadigas, Maharashtrians and all other residents of Brihan Mumbai, belonging to any linguistic, religious and ethnic groups.

g) To medical aid to members and general public by establishing and running medical diagnostic centre, nursing homes, hospitals etc.

h) To promote activities designed to encourage Kannadiga youth and women in social welfare programmes, leadership training, sports, fine arts, literary, cultural and intellectual pursuits etc.

i) To disseminate information to its members & public on literature, culture, History & education.

j) To promote activities that will help national integration

k) To purchase, take on lease or in exchange or otherwise acquire, develop, any moveable or immovable property/properties which may be necessary for the purpose of, or uses, in connection with any of the objects of the Sangha, and sell, demise, lease, mortgage, encumber, grant in exchange, surrender or dispose of any such property

l) To invest its funds in Government securities, debentures and approved securities and also to sell endorse, transfer, negotiate, vary or otherwise deal in Government securities and other approved securities.

m) To Co-ordinate and Co-operate with other Kannada non-political organizations having objects similar to the Sangha.

n) To engage in any other lawful activities, which is conducive to the promotion of any or all of the objects of the Sangha, mentioned above.

KARNATAKA SANGHA, MUMBAI

(Regd. under the Societies Registration Act. 1860 & Bombay Public Trust Act 1950)

F.P. No. 262, C.S.M. Marg, Off. T.H. Kataria Marg, Matunga (W), **Mumbai - 400 016**

E-mail: ksanghamumbai@gmail.com

Website : http://karnatakasanghamumbai.in

AGM NOTICE

The 92nd (2025 - 2026) Annual General Body Meeting of the Karnataka Sangha will be held at 03.30 p.m. on SUNDAY 27th, September 2026 at Karnataka Sangha, F.P. NO.262, C.S.M. Marg, Off. T.H. Kataria Marg, Matunga (W), Mumbai - 400 016 to consider / transact the following businesses :-

1. To confirm the minutes of proceedings Extra Ordinary General Body Meeting held on 29th September 2026.
2. To confirm the minutes of proceedings 91st Annual General Body Meeting held on 20th September 2025.
3. To Consider & adopt the Annual report of Managing Committee, Audited Statements of Accounts and report of the Auditors of Sangha for the year 2025 - 2026
4. To appoint Statutory Auditor for the year 2026 - 2027 & fix their remuneration.
5. To appoint Internal Auditor for the year 2026 - 2027 & fix their remuneration.
6. To appoint a panel of election officers for the year 2026 - 2027
7. To appoint Honorary legal advisor for the year 2026 - 2027.
8. To consider and approve the Estimated Budget for the year 2026 - 2027
9. To Consider any other matter with the permission of the chair.

Mumbai
Date : 28-08-2026

By Order of the Managing Committee
Sd/-
Omdas Kannangar
Hon. Secretary

PS : 1. Any Member who desires to have additional information in connection with Annual Report and Audited Accounts, is requested to intimate the same to Hon. Secretary on or before 23.09.2026

2. Annual Report for the year 2025 - 2026 is already uploaded in the Sangha's website and members are requested to go through the same. As decided in the AGM dated 30.07.2023, Sangha refrains from circulating the hard copies of the Reports.

3. Members desirous to have soft copy of Annual Report, may please send a request to Sangha's E-mail ID: ksanghamumbai@gmail.com

ಕರ್ನಾಟಕ ಸಂಘ ಮುಂಬಯಿ

(Regd. under the Societies Registration Act. 1860 & Bombay Public Trsut Act 1950)
F.P. No. 262, C.S.M. Marg , Off. T.H. Kataria Marg, Matunga (W), **Mumbai - 400 016**
E-mail: ksanghamumbai@gmail.com
Website : http://karnatakasanghamumbai.in

ತಿಳುವಳಿಕೆ ಪತ್ರ

ಕರ್ನಾಟಕ ಸಂಘ ಮುಂಬಯಿ ಇದರ **92ನೆಯ (2025 – 2026) ವಾರ್ಷಿಕ ಮಹಾಸಭೆ**ಯು ದಿನಾಂಕ **ಸೆಪ್ಟೆಂಬರ್ 27, ರವಿವಾರ 2026ರಂದು** ಅಪರಾಹ್ನ 3.30 ಗಂಟೆಗೆ ಕರ್ನಾಟಕ ಸಂಘ, ಎಫ್.ಪಿ. ನಂ. 262, ಛತ್ರಪತಿ ಶಿವಾಜಿ ಮಾರ್ಗ, ಮಾಟುಂಗ (ಪಶ್ಚಿಮ), ಮುಂಬಯಿ – 400 016 ಇಲ್ಲಿ ಈ ಕೆಳಗಿನ ಕಾರ್ಯ ಸೂಚಿಯನ್ನು ಪರಿಗಣಿಸಲು ಜರಗಲಿದೆ:

1) ದಿನಾಂಕ 29/08/2026ರಂದು ಜರಗಿದ ವಿಶೇಷ ಮಹಾಸಭೆಯ ನಡಾವಳಿಗಳ ಧೃಡೀಕರಣ.
2) 20 ಸಪ್ಟೆಂಬರ್ 2025 ರಂದು ನಡೆದ 91ನೆಯ ವಾರ್ಷಿಕ ಮಹಾಸಭೆಯ ನಡಾವಳಿಗಳ ಧೃಡೀಕರಣ.
3) 2025 - 2026 ಸಾಲಿನ ಕಾರ್ಯಕಾರಿ ಸಮಿತಿಯ ವಾರ್ಷಿಕ ವರದಿ ಮತ್ತು ವಾರ್ಷಿಕ ಲೆಕ್ಕಪರಿಶೋಧಕರಿಂದ ಪರಿಶೋಧಿಸಲ್ಪಟ್ಟ ಆಯ–ವ್ಯಯ ಹಾಗೂ ಆಸ್ತಿ ಹೊಣೆಯ ವಿವರಣಾತ್ಮಕ ವರದಿಯ ಮಂಡನೆ ಮತ್ತು ಧೃಡೀಕರಣ.
4) 2026 - 2027 ಸಾಲಿಗೆ ವಾರ್ಷಿಕ ಲೆಕ್ಕಪರಿಶೋಧಕರ ನೇಮಕಾತಿ ಮತ್ತು ಅವರ ಸಂಭಾವನೆಯ ನಿಗದಿ.
5) 2026 - 2027 ಸಾಲಿನ ಆಂತರಿಕ ಲೆಕ್ಕಪರಿಶೋಧಕರ ನೇಮಕಾತಿ ಮತ್ತು ಅವರ ಸಂಭಾವನೆಯ ನಿಗದಿ.
6) 2026 - 2027 ಸಾಲಿಗೆ ಚುನಾವಣಾ ಅಧಿಕಾರಿಗಳ ನೇಮಕ.
7) 2026 - 2027 ಸಾಲಿಗೆ ಗೌರವ ಕಾನೂನು ಸಲಹೆಗಾರರ ನೇಮಕ.
8) 2026 - 2027 ಸಾಲಿಗೆ ಅಂದಾಜು ವಾರ್ಷಿಕ ಬಜೆಟ್ ಮಂಡನೆ ಮತ್ತು ಮಂಜೂರಾತಿ
9) ಅಧ್ಯಕ್ಷರ ಅನುಮತಿ ಮೆರೆಗೆ ಇನ್ನಿತರ ವಿಷಯಗಳು.

ಮುಂಬೈ
28.08.2026

ಕಾರ್ಯಕಾರಿ ಸಮಿತಿಯ ಆದೇಶದ ಮೇರೆಗೆ
ಓಂದಾಸ್ ಕಣ್ಣಂಗಾರ್
ಗೌ. ಕಾರ್ಯದರ್ಶಿ

ವಿ.ಸೂ. :1. ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧಿತ ಲೆಕ್ಕಪತ್ರಗಳಿಗೆ ಸಂಬಂಧಿಸಿದಂತೆ ಹೆಚ್ಚಿನ ಮಾಹಿತಿಯನ್ನು ಪಡೆಯಲು ಬಯಸುವ ಸದಸ್ಯರು, ಆ ಬಗ್ಗೆ ಗೌರವ ಕಾರ್ಯದರ್ಶಿಯವರಿಗೆ 23.09.2026ರಂದು ಅಥವಾ ಅದಕ್ಕೂ ಮುನ್ನ ತಿಳಿಸುವಂತೆ ಕೋರಲಾಗಿದೆ.

2. 2025–26ನೇ ಸಾಲಿನ ವಾರ್ಷಿಕ ವರದಿಯನ್ನು ಈಗಾಗಲೇ ಸಂಘದ ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡಲಾಗಿದೆ ಮತ್ತು ಸದಸ್ಯರು ಅದನ್ನು ಪರಿಶೀಲಿಸುವಂತೆ ಕೋರಲಾಗಿದೆ. 30.07.2023 ರಂದು ನಡೆದ ವಾರ್ಷಿಕ ಸಾಮಾನ್ಯ ಸಭೆಯಲ್ಲಿ (AGM) ನಿರ್ಧರಿಸಿದಂತೆ, ಸಂಘವು ವರದಿಗಳ ಮುದ್ರಿತ ಪ್ರತಿಗಳನ್ನು (hard copies) ವಿತರಿಸದಿರಲು ನಿರ್ಧರಿಸಿದೆ.

3. ವಾರ್ಷಿಕ ವರದಿಯ ಸಾಫ್ಟ್‌ಕಾಪಿ (soft copy) ಪಡೆಯಲು ಇಚ್ಛಿಸುವ ಸದಸ್ಯರು, ದಯವಿಟ್ಟು ಸಂಘದ ಈ–ಮೇಲ್‌ವಿಳಾಸಕ್ಕೆ (ksanghamumbai@gmail.com) ಮನವಿಯನ್ನು ಕಳುಹಿಸಬಹುದು.

ಕರ್ನಾಟಕ ಸಂಘ ಮುಂಬಯಿ

92ನೆಯ ವಾರ್ಷಿಕ ವರದಿ

2025 - 2026

ಆತ್ಮೀಯ ಬಂಧುಗಳೇ,

ನಮ್ಮ ಸಂಘದ 92ನೆಯ ವಾರ್ಷಿಕ ವರದಿ ಮತ್ತು ಲೆಕ್ಕ ಪರಿಶೋಧಕರಿಂದ ಪರಿಶೋಧಿಸಲ್ಪಟ್ಟ 2025 – 2026ರ ಆಯ–ವ್ಯಯ ಪಟ್ಟಿ ಮತ್ತು ಹೊಣೆಯ (Assets & Liabilities) ವಿವರಣಾತ್ಮಕ ವರದಿಯನ್ನು 92ನೆಯ ವಾರ್ಷಿಕ ಮಹಾಸಭೆಗೆ ಸಾದರ ಪಡಿಸುತಿದ್ದೇವೆ.

ಸಂಘದ 91ನೆಯ ವಾರ್ಷಿಕ ಮಹಾಸಭೆಯು ಸಂಘದ ಅಧ್ಯಕ್ಷರಾದ ಡಾ. ಭರತ್ ಕುಮಾರ್ ಪೊಲಿಪು ಅವರ ಅಧ್ಯಕ್ಷತೆಯಲ್ಲಿ ದಿನಾಂಕ ಸಪ್ಟೆಂಬರ್ 20, ಶನಿವಾರ 2025 ಸಂಜೆ 03.30 ಗಂಟೆಗೆ ಕರ್ನಾಟಕ ಸಂಘ, ಎಫ್.ಪಿ. ನಂ. 262, ಸಿ.ಎಸ್.ಎಂ. ಮಾರ್ಗ್, ಆಫ್. ಟಿ.ಎಚ್. ಕಟಾರಿಯಾ ಮಾರ್ಗ, ಮಾಟುಂಗಾ (ಪ), ಮುಂಬೈ – 400 016 ಇಲ್ಲಿ ಜರಗಿತು. ಅಂದು 2024 – 2025ರ ಆರ್ಥಿಕ ವರ್ಷದ ವರದಿ ಮತ್ತು ಲೆಕ್ಕ–ಪತ್ರವನ್ನು ಮಂಡಿಸಲಾಗಿ ಅದನ್ನು ಸರ್ವಾನುಮತದಿಂದ ಅಂಗೀಕರಿಸಲಾಯ್ತು.

2025–2026 ಸಾಲಿಗೆ ವಾರ್ಷಿಕ ಲೆಕ್ಕ ಪರಿಶೋಧಕರನ್ನಾಗಿ ಮೆ. ಅಶ್ವಜಿತ್ ಅಸೋಸೊಯೇಟ್ಸ್ ಸಿ ಎ. ರವರನ್ನು ಮತ್ತು ಆಂತರಿಕ ಲೆಕ್ಕಪರಿಶೋಧಕರನ್ನಾಗಿ ಮೆ. ರಾಜೇಶ್ ಶೇಟ್. ಸಿ.ಎ. ಅವರನ್ನು ನೇಮಿಸಲಾಯ್ತು. 2025–2026 ಸಾಲಿಗೆ ಚುನಾವಣಾ ಅಧಿಕಾರಿಗಳನ್ನಾಗಿ ಶ್ರೀ ನಾರಾಯಣ ಜಿ ಮೆಂಡನ್, ಶ್ರೀ ರಮೇಶ ರಾವ್, ಮತ್ತು ಶ್ರೀ ಆನಂದ ಎಂ. ಶೆಟ್ಟಿಯವರನ್ನು ನೇಮಿಸಲಾಯ್ತು. 2025–2026 ಸಾಲಿಗೆ ಗೌರವ ಕಾನೂನು ಸಲಹೆಗಾರರನ್ನಾಗಿ ಶ್ರೀ ಅಡ್ವಕೇಟ್ ಎಂ. ಡಿ. ರಾವ್ ಅವರನ್ನು ನೇಮಿಸಲಾಯ್ತು. 2025–2026 ಸಾಲಿನ ವಾರ್ಷಿಕ ಬಜೆಟನ್ನು ಜೊತೆ ಕೋಶಾಧಿಕಾರಿ ಶ್ರೀ ಸದಾನಂದ ಅಮೀನ್ ಮಂಡಿಸಿದರು. ಅದು ಸರ್ವಾನುಮತದಿಂದ ಅಂಗೀಕಾರವಾಯ್ತು.

ಸಂಘದ ಸದಸ್ಯರ ಯಾದಿ

ಸದಸ್ಯ ಸಂಘ ಸಂಸ್ಥೆಗಳು	07
ಮಹಾಪೋಷಕರು	45
ಪೋಷಕರು	37
ಆಜೀವ ಸದಸ್ಯರು	3401
ಒಟ್ಟು	**3490**

ಕರ್ನಾಟಕ ಸಂಘ ಮುಂಬಯಿ
91ನೇ ವಾರ್ಷಿಕ ಮಹಾಸಭೆ

ಸಂಘದ ಸಾಂಸ್ಕೃತಿಕ ಸಮುಚ್ಛಯದ ಕಾಮಗಾರಿ ತ್ವರಿತ ಗತಿಯಲ್ಲಿ ಸಾಗುತಿದ್ದು ಪ್ರಥಮ ಹಂತವಾಗಿ ಮೊದಲ ಸಭಾಗೃಹ ವನ್ನು ಶೀಘ್ರ ಲೋಕಾರ್ಪಣೆ ಮಾಡುವ ಯೋಜನೆ ನಮ್ಮದಾಗಿದೆ. ಈಗಾಗಲೇ ಬೇಸ್‌ಮೆಂಟ್ ಹಾಗೂ ಮೊದಲ ಮಹಡಿ ಮುಕ್ತಾಯವಾಗಿ ಎರಡನೆಯ ಮಹಡಿಯ ಕೆಲಸ ನಡೆಯುತ್ತಿದೆ. ನಮ್ಮ ಹಿರಿಯರು ಜಾತ್ಯಾತೀತ ನೆಲೆಯಲ್ಲಿ ಕರ್ನಾಟಕ ಸಂಘವನ್ನು ಬೆಳೆಸುತ್ತಾ ಬಂದವರು. ಅವರು ಹಾಕಿ ಕೊಟ್ಟ ಸಾಂಸ್ಕೃತಿಕ ವಿನ್ಯಾಸವನ್ನು ನಾವು ಮುಂದುವರಿಸಿಕೊಂಡು ಹೋಗುತ್ತಿದ್ದೇವೆ. ನಮ್ಮ ಆ ಕಾಲದ ಸಾಮಾಜಿಕ ಸೇವೆಯ ಪರಿಕಲ್ಪನೆ ಈಗ ಬದಲಾಗಿದೆ. ನಾವು ಸಾಂಸ್ಕೃತಿಕವಾಗಿ ಯೋಚಿಸಬೇಕು ತಾತ್ವಿಕವಾಗಿ ಚಿಂತಿಸಬೇಕು. ನಗರ ಬದುಕಿನಲ್ಲಿ ಭಿನ್ನ ಭಿನ್ನ ಸಂಸ್ಕೃತಿಯ ಪ್ರಭಾವದಲ್ಲಿ ಕನ್ನಡ ಸಂಸ್ಕೃತಿಯನ್ನು ಉಳಿಸಿ ಬೆಳೆಸುವುದು ಸವಾಲಿನ ಕೆಲಸ. "ಮಗು ಜನಿಸುವಾಗ ವಿಶ್ವಮಾನವನಾಗಿ ಜನಿಸುತ್ತದೆ. ಬಳಿಕ ಸಾಮಾಜಿಕ ವ್ಯವಸ್ಥೆಯ ಕಾರಣದಿಂದಾಗಿ ಅಲ್ಪ ಮಾನವನಾಗುತ್ತಾನೆ. ಮತ್ತೆ ವಿಶ್ವಮಾನವನಾಗಬೇಕು." ಎಂದು ರಾಷ್ಟ್ರಕವಿ ಕುವೆಂಪು ಸಾರಿದ್ದಾರೆ. ಈ ವಿಶ್ವಮಾನವ ಆಗುವ ಪ್ರಕ್ರಿಯೆ ಸಾಹಿತ್ಯ ಸಂಸ್ಕೃತಿಯ ಮೂಲಕ ಸಾಧ್ಯವಾಗಬೇಕು. ಅದಕ್ಕೆನೆ ಕರ್ನಾಟಕ ಸಂಘ ದಂತಹ ಸಂಸ್ಥೆಗಳು ಅಗತ್ಯವಾಗಿದೆ. ಸಾಂಸ್ಕೃತಿಕವಾಗಿ ಹೊಸ ಹೊಸ ಚಿಂತನೆಗಳನ್ನು ಬೆಳೆಸಿದಾಗ ಮಾನವೀಯ ಮೌಲ್ಯ ಗಟ್ಟಿಗೊಳ್ಳುತ್ತದೆ ಎಂದು ಅಧ್ಯಕ್ಷರಾದ ಡಾ. ಭರತ ಕುಮಾರ್ ಪೊಲಿಪು ಅಭಿಪ್ರಾಯಪಟ್ಟರು. ಅವರು ಸುವರ್ಣ ಕರ್ನಾಟಕ ರಾಜೋತ್ಸವ ಪ್ರಶಸ್ತಿ ಪುರಸ್ಕೃತ, ಮುಂಬಯಿ ಕನ್ನಡಿಗರ ಪ್ರಾತಿನಿಧಿಕ ಸಂಸ್ಥೆ ಕರ್ನಾಟಕ ಸಂಘದ ನೂತನ ಸಾಂಸ್ಕೃತಿಕ ಸಮುಚ್ಚಯದ ಮೊದಲ ಮಹಡಿಯಲ್ಲಿ ದಿ. 20 ಶನಿವಾರ ಸೆಪ್ಟೆಂಬರ್ 2025 ರಂದು ಜರಗಿದ 91 ನೆಯ ವಾರ್ಷಿಕ ಮಹಾಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಮಹಾಸಭೆಯಲ್ಲಿ ಉಪಸ್ಥಿತರಿದ್ದ ಕರ್ನಾಟಕ ನಾಟಕ ಅಕಾಡೆಮಿ ಪ್ರಶಸ್ತಿ ಪುರಸ್ಕೃತ ರಂಗ ಕಲಾವಿದ ಮೋಹನ್ ಮಾರ್ನಾಡ್ ಮಾತನಾಡುತ್ತಾ, ಇಂದು ಸಂಘದ ನೂತನ ಸಾಂಸ್ಕೃತಿಕ ಸಮುಚ್ಛಯದಲ್ಲೆ ಮಹಾಸಭೆ ನಡೆಯುತ್ತಿರುವುದು ಕಂಡು ಹೃದಯ ತುಂಬಿ ಬಂದಿದೆ. ಆದಷ್ಟು ಬೇಗ ಕಟ್ಟಡದ ಕೆಲಸ ಮುಗಿದು ಸಂಘದ ಸಾಂಸ್ಕೃತಿಕ ಕಾರ್ಯಕ್ರಮ ಮತ್ತೆ ಆರಂಭವಾಗ ಬೇಕು. ಕನ್ನಡಕ್ಕಾಗಿ ನಾವೆಲ್ಲ ಒಟ್ಟಾಗಿ ಕೆಲಸ ಮಾಡೋಣ. ಎಂದು ಶುಭ ಹಾರೈಸಿದರು ಕಳೆದ ನಾಲ್ಕುವರೆ ದಶಕಗಳಿಂದ ಸಂಘದೊಂದಿಗೆ ಅವಿನಾಭಾವ ಸಂಬಂಧ ಇರುವ ನನಗೆ ಅದರ ಬಗ್ಗೆ ಅಪಾರ ಗೌರವ ಇದೆ. ಇಂದು ಮಹಾಸಭೆಯನ್ನು ಇಲ್ಲಿಯೇ ಆಯೋಜನೆ ಮಾಡಿದ್ದು ತುಂಬ ಖುಷಿಯ ಸಂಗತಿಯಾಗಿದ್ದು, ಮಹತ್ವದ ಈ ಯೋಜನೆಗೆ ಎಲ್ಲರೂ ಕೈ ಜೋಡಿಸಬೇಕು ಎಂದು ಸಂಘದ ಹಿತಚಿಂತಕರಾದ ನಾರಾಯಣ ಜಿ. ಮೆಂಡನ್ ಹೇಳಿದರು. ಇಂತಹ ಒಂದು ಸಮಾಜಪರವಾದ ಕೆಲಸಕ್ಕೆ ತುಂಬ ಪ್ರಾಮಾಣಿಕವಾಗಿ ದುಡಿಯುವ ಸಂಘದ ಪದಾಧಿಕಾರಿಗಳನ್ನು ನಾನು ತುಂಬ ಹತ್ತಿರದಿಂದ ಕಂಡಿದ್ದೇನೆ. ಖಂಡಿತಾ ಈ ಕೆಲಸ ಒಳ್ಳೆಯ ರೀತಿಯಿಂದ ಆಗುತ್ತದೆ.ನಾನು ಕೂಡ ನನ್ನಿಂದಾದ ಸಹಾಯವನ್ನು ಖಂಡಿತಾ ಮಾಡುತ್ತೇನೆ ಎಂದು ಉದ್ಯಮಿ ಅಶ್ವಿನಿ ಶೆಟ್ಟಿ ಅವರು ಹೇಳಿದರು.

ಈ ಸಂದರ್ಭದಲ್ಲಿ ಹೆಸರಾಂತ ರಂಗ ಕಲಾವಿದೆ ಸುಧಾ ಶೆಟ್ಟಿ, ನಿವೃತ್ತ ಶಿಕ್ಷಕ ಅಮರೀಶ್ ಪಾಟೀಲ್, ಹಿರಿಯ ರಂಗ ನಟ ಕಮಲಾಕ್ಷ ಸರಾಫ್ ಮುಂತಾದವರು ಅಭಿಪ್ರಾಯವನ್ನು ವ್ಯಕ್ತಪಡಿಸಿ ದೇಣಿಗೆ ನೀಡುವ ಭರವಸೆಯನ್ನು

ನೀಡಿದರು. ಸಂಘದ ಗೌ. ಕಾರ್ಯದರ್ಶಿ ಓಂದಾಸ್ ಕಣ್ಣಂಗಾರ್ ಅವರು ಮಾತನಾಡುತ್ತಾ ಹೊರನಾಡಿನಲ್ಲಿ ಕನ್ನಡ ಭಾಷೆ, ಸಂಸ್ಕೃತಿಯನ್ನು ಬಹುಕಾಲ ಉಳಿಸಿ ಬೆಳೆಸಿ ಮೇಳೈಸಿದ ಕರ್ನಾಟಕ ಸಂಘ ಒಂದು ಅಸಾಧಾರಣ ಸಂಸ್ಥೆಯಾಗಿದೆ. ಸಂಘದ ಮಹತ್ವಾಕಾಂಕ್ಷೆಯ ಈ ಮಹೋನ್ನತ ಕೆಲಸಕ್ಕಾಗಿ ತುಂಬ ಜನರು ಸ್ಪಂದಿಸಿದ್ದಾರೆ. ಅತ್ಯಂತ ಸವಾಲಿನ ಕೆಲಸದ ಸಂದಿಗ್ಧ ಪರಿಸ್ಥಿಯಲ್ಲಿ ನಮಗೆ ನಾವೇ ಧೈರ್ಯ ಹೇಳುತ್ತಾ, ನಮಗೆ ನಾವೇ ಸಮಾಧಾನ ಪಡಿಸುತ್ತಾ ಈ ಕೆಲಸವನ್ನು ಭಕ್ತಿ ಮತ್ತು ಶ್ರದ್ಧೆಯಿಂದ ಮಾಡುತ್ತಾ ಬಂದಿದ್ದೇವೆ. ನಮ್ಮ ಈ ಕೆಲಸದಲ್ಲಿ ದೇವರು ನಮ್ಮೊಂದಿಗೆ ಇದ್ದಾನೆ ಮತ್ತು ದೈವತ್ವದ ಆ ಶಕ್ತಿಯೊಂದೇ ನಮ್ಮನ್ನು ಇಲ್ಲಿಯವರೆಗೆ ಕರೆತಂದಿದೆ ಎಂಬ ನಂಬಿಕೆ ನಮ್ಮದು.ಈ ಸಂದರ್ಭದಲ್ಲಿ ನಾವು ಎಂತೆಂತಹ ಹೃದಯವಂತ ಮನಸ್ಸುಗಳನ್ನು ಕಂಡಿದ್ದೇವೆ.ಬಹುಕಾಲ ನೆನಪಿನಲ್ಲಿ ಉಳಿಯುವ ಈ ಕೆಲಸಕ್ಕೆ ಅವರ ಬೆಂಬಲ ಕಂಡು ಹೃದಯ ತುಂಬಿ ಬಂದಿದೆ.ಕನ್ನಡದ ದೇಗುಲ ಆದಷ್ಟು ಬೇಗ ನಿರ್ಮಾಣ ಗೊಂಡು,ಮತ್ತೆ ಚಟುವಟಿಕೆಗಳು ಗರಿಕೆದರಬೇಕು ಎಂಬುದೇ ನಮ್ಮ ಬಹುದೊಡ್ಡ ಕನಸಾಗಿದೆ. ಇಲ್ಲಿ ನಮಗೆ ಕಟ್ಟಡ ಕಟ್ಟುವುದೇ ಮುಖ್ಯವಾಗಿದ್ದು, ಅದನ್ನು ಯಾರು ಕಟ್ಟುವುದು ಎಂಬುದು ಮುಖ್ಯವಲ್ಲ.ಸಂಘದ ಆತ್ಮ ನಿವೇದನೆಗೆ ದನಿಯಾಗಿ, ದೇಣಿಗೆಯ ಭರವಸೆ ನೀಡಿದವರು ಆದಷ್ಟು ಬೇಗ ನೀಡಿ ಸಹಕರಿಸ ಬೇಕು.ಅದುವೇ ನಮ್ಮ ಈ ಕ್ಷಣದ ವಿನಂತಿಯಾಗಿದೆ.&ಡಣಠಣ; ಕಟ್ಟಡ ನಿರ್ಮಾಣ ಕಾರ್ಯದಲ್ಲಿ ತಾಂತ್ರಿಕವಾಗಿ ನಿರಂತರ ತೊಡಗಿಸಿ ಕೊಂಡ ಸಿವಿಲ್ ಇಂಜಿನಿಯರ್ ವಿಶ್ವೇಶ್ವರ ಎಂ.ಮೇಟಿ, ಅಡ್ವಕೇಟ್ ರಾಘವ ಎಂ. ಲಕ್ಷ್ಮಣ ಪುತ್ರನ್, ಡಾ. ಬಿ. ಆರ್. ಮಂಜುನಾಥ್ ಹಾಗೂ ಕೆ. ಮಂಜುನಾಥಯ್ಯರವರ ಸೇವೆ ಶ್ಲಾಘನೀಯವಾದುದು" ಎಂದರು.

ಕಟ್ಟಡ ಪ್ರಗತಿಯ ಕುರಿತು ಸಮಿತಿ ಸದಸ್ಯರೂ ಹಾಗೂ ನಿರ್ಮಾಣ ಕ್ಷೇತ್ರದಲ್ಲಿ ಪರಿಣಿತರಾದ ಲಕ್ಷ್ಮಣ ಪುತ್ರನ್ ಅವರು ವಿವರ ನೀಡಿದರು.

ಸಂಘದ ಸದಸ್ಯೆ ಶ್ರೀಮತಿ ಸಂಗೀತಾ ಅಮ್ಲಾಡಿಯವರು ಮಾತನಾಡುತ್ತಾ "ತಾನು ಸುಧೀರ್ಘ ಕಾಲದಿಂದ ಸಂಘದ" 'ಕಲಾಭಾರತಿ'ಯಲ್ಲಿ ಸೇವೆ ಸಲ್ಲಿಸುತಿದ್ದೇನೆ ಎನ್ನಲು ಹೆಮ್ಮೆ ಅನಿಸುತ್ತಿದೆ, ಸಂಘದ ಈ ಮಹತ್ತರ ಯೋಜನೆಗೆ ರೂಪಾಯಿ 5,11.000/– ನೀಡಿದ್ದೇನೆ. ಎಲ್ಲರೂ ಈ ಬಗ್ಗೆ ಸಹಕರಿಸಬೇಕು ಎಂದರು.

ಆರಂಭದಲ್ಲಿ ಇತ್ತೀಚೆಗೆ ನಿಧನರಾದ ಸಂಘದ ಮಾಜಿ ಅಧ್ಯಕ್ಷರಾದ ಡಾ. ಜಿ. ಡಿ. ಜೋಷಿ ಮಾಜಿ ಉಪಾಧ್ಯಕ್ಷರಾದ ಬಿ. ಜಿ. ನಾಯಕ್ ಹಾಗೂ ಸಂಗೀತ ವಿದುಷಿ ಸರೋಜಾ ಶ್ರೀನಾಥ್ ಅವರಿಗೆ ಶ್ರದ್ಧಾಂಜಲಿ ಅರ್ಪಿಸಲಾಯ್ತು. ವೇದಿಕೆಯಲ್ಲಿ ಮಾಜಿ ಅಧ್ಯಕ್ಷರು ಮತ್ತು ಕಟ್ಟಡ ನಿರ್ಮಾಣ ಸಮಿತಿಯ ಕಾರ್ಯಧ್ಯಕ್ಷರಾದ ಮನೋಹರ್ ಎಂ. ಕೋರಿ, ಉಪಾಧ್ಯಕ್ಷರಾದ ಡಾ. ಈಶ್ವರ ಅಲೆವೂರು, ಗೌ. ಜತೆ ಕೋಶಾಧಿಕಾರಿ ಸದಾನಂದ ಅಮೀನ್, ಸಮಿತಿ ಸದಸ್ಯರಾದ ಎನ್. ಬಿ. ಸವಾಳ ಸಂಗ್ ಉಪಸ್ಥಿತರಿದ್ದರು. ಕೊನೆಯಲ್ಲಿ ಗೌ. ಕಾರ್ಯದರ್ಶಿ ಓಂದಾಸ್ ಕಣ್ಣಂಗಾರ್ ವಂದನಾರ್ಪಣೆ ಗೈದರು. ರಾಷ್ಟ್ರಗೀತೆಯೊಂದಿಗೆ ಮಹಾಸಭೆ ಸಂಪನ್ನಗೊಂಡಿತು.

ಪ್ರಕಾಶ್ ಬೆಳವಾಡಿ ಭೇಟಿ



ಇತ್ತೀಚೆಗೆ ಕರ್ನಾಟಕ ಸಂಘದ ನೂತನ ಸಾಂಸ್ಕೃತಿಕ ಸಮುಚ್ಚಯದ ಕಾಮಗಾರಿಯನ್ನು ವೀಕ್ಷಿಸಲು ಆಗಮಿಸಿದ್ದ ಪ್ರಕಾಶ್ ಬೆಳವಾಡಿ, ಶ್ರೀನಿವಾಸ ಜಿ. ಕಪ್ಪಣ್ಣ, ಗಾಯಕ ರಾಮಚಂದ್ರ ಹಡಪದ, ಚಲನಚಿತ್ರ ನಿರ್ಮಾಪಕ ದೇವೇಂದ್ರ ಬಡಿಗೇರ್, ಅವರೊಂದಿಗೆ ಸಾಹಿತಿ ಹರೀಶ್ ಹೆಜ್ಜಾಡಿ, ಲೋಕೇಶ್, ಸುಶೀಲಾ ದೇವಾಡಿಗ, ಸೂರಿ ಮಾರ್ನಾಡ್ ಮತ್ತು ಡಾ. ಭರತ್‌ಕುಮಾರ್ ಪೊಲಿಪು.

ಸಂಜಯ್ ಶೆಟ್ಟಿ ಭೇಟಿ



ಕರ್ನಾಟಕ ಸಂಘವು ಕನ್ನಡದ ಭಾಷಾ ಬಾಂಧವ್ಯವನ್ನು ಗಟ್ಟಿ ಗೊಳಿಸಿದ ಹೆಮ್ಮೆಯ ಸಂಸ್ಥೆ : ಸಂಜಯ್ ಆರ್. ಶೆಟ್ಟಿ ಕರ್ನಾಟಕ ಸಂಘದ ಈ ಮಹತ್ತರವಾದ ಯೋಜನೆ ಬಗ್ಗೆ ತಿಳಿದು ಮತ್ತು ಕಣ್ಣಾರೆ ನೋಡಿ ತುಂಬ

ಅಭಿಮಾನವಾಯಿತು.ಮರಾಠಿ ನೆಲದಲ್ಲಿ ಕನ್ನಡದ ಕಂಪನ್ನು ಪಸರಿಸಿ, ಕನ್ನಡದ ಭಾಷಾ ಬಾಂಧವ್ಯವನ್ನು ಗಟ್ಟಿ ಗೊಳಿಸಿದ ಕರ್ನಾಟಕ ಸಂಘ ಕನ್ನಡಿಗರ ಹೆಮ್ಮೆಯ ಸಂಸ್ಥೆಯಾಗಿದೆ. ಸಮಾಜದ ಕೆಲಸವಾದ ಇದಕ್ಕೆ ಕೈ ಜೋಡಿಸುವುದರಿಂದ, ಸಮಾಜಕ್ಕೆ ಖಂಡಿತಾ ಒಳ್ಳೆದು ಮಾಡಿದಂತಾಗುತ್ತದೆ ಎಂದು ಉದ್ಯಮಿ, ಸಮಾಜ ಸೇವಕರಾದ ಸಂಜಯ್ ಆರ್. ಶೆಟ್ಟಿ ಅವರು ಹೇಳಿದರು.

ದಿ. 20 ಮಾರ್ಚ್ ಶುಕ್ರವಾರದಂದು ಮುಂಬಯಿ ಕನ್ನಡಿಗರ ಪ್ರಾತಿನಿಧಿಕ ಸಂಸ್ಥೆ, ಸುವರ್ಣ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಕರ್ನಾಟಕ ಸಂಘದ ನೂತನ ಸಾಂಸ್ಕೃತಿಕ ಸಮುಚ್ಚಯದ ಕಾಮಗಾರಿಯನ್ನು ವೀಕ್ಷಿಸಿ ಅವರು ಮಾತನಾಡಿದರು. ಇನ್ನೋರ್ವ ಖ್ಯಾತ ನ್ಯಾಯವಾದಿ ಶಿವಪ್ರಸಾದ್ ಶೆಟ್ಟಿಯವರು ಮಾತನಾಡಿ,ನಮ್ಮೆಲ್ಲರ ಪ್ರೀತಿ,ಅಭಿಮಾನದ ಕನ್ನಡ ಭಾಷೆಯನ್ನು ಮುಂಬಯಿ ನಗರದಲ್ಲಿ ಶ್ರೀಮಂತ ಗೊಳಿಸಿದ ಕರ್ನಾಟಕ ಸಂಘವು ಕನ್ನಡಿಗರ ನೆಚ್ಚಿನ ಸಂಸ್ಥೆಯಾಗಿದ್ದು, ಇಂದು ಹೊಸ ಪರಿಕಲ್ಪನೆಯೊಂದಿಗೆ ರೂಪು ಗೊಳ್ಳುತ್ತಿರುವ ಕಟ್ಟಡವನ್ನು ನೋಡಿ ತುಂಬ ಖುಷಿ ಆಯಿತು.ಮುಂದಿನ ಕೆಲಸ ಅದಷ್ಟು ಬೇಗ ಆಗುವಂತೆ ನಾವೆಲ್ಲರೂ ಸಹಕರಿಸೋಣ ಎಂದು ಶುಭ ಹಾರೈಸಿದರು

ಅವರನ್ನು ಕರ್ನಾಟಕ ಸಂಘದ ನೂತನ ಸಾಂಸ್ಕೃತಿಕ ಸಮುಚ್ಚಯ ನಿರ್ಮಾಣದ ಕಾರ್ಯಾಧ್ಯಕ್ಷರಾದ ಮನೋಹರ್ ಎಂ. ಕೋರಿಯವರು ಶಾಲು ಹೊದಿಸಿ, ಪುಷ್ಪಗುಚ್ಛ ಮತ್ತು ನೂತನ ಸಾಂಸ್ಕೃತಿಕ ಸಮುಚ್ಚಯದ ಕಿರುಹೊತ್ತಿಗೆಯನ್ನು ನೀಡಿ ಗೌರವಿಸಿದರು. ಈ ಸಂದರ್ಭದಲ್ಲಿ ಉದ್ಯಮಿ, ಸಮಾಜ ಸೇವಕ ಭಾಲಕೃಷ್ಣ ಭಂಡಾರಿ, ಕರ್ನಾಟಕ ಸಂಘದ ಅಧ್ಯಕ್ಷರಾದ ಡಾ.ಭರತ್ ಕುಮಾರ್ ಪೊಲಿಪು, ಗೌ ಕಾರ್ಯದರ್ಶಿ ಓಂದಾಸ್ ಕಣ್ಣಂಗಾರ್ ಉಪಸ್ಥಿತರಿದ್ದರು.

ಎನ್. ಬಿ. ಶೆಟ್ಟಿ ಭೇಟಿ



ಕರ್ನಾಟಕ ಸಂಘದ ಸಾಂಸ್ಕೃತಿಕ ಸಮುಚ್ಚಯದ ನಿರ್ಮಾಣದ ಕಾಮಗಾರಿ ಪ್ರಗತಿಯನ್ನು ಮುಂಬಯಿಯ ತ್ರಿವೇಣಿ ಸಮೂಹ ಕಂಪೆನಿಗಳ ಕಾರ್ಯಾಧ್ಯಕ್ಷರಾದ ಪ್ರಖ್ಯಾತ ಸಮಾಜ

ಸೇವಕರಾದ ಸಿ.ಎ.ಎನ್.ಬಿ. ಶೆಟ್ಟಿ ಯವರು ಇತ್ತೀಚೆಗೆ ವೀಕ್ಷಿಸಿ ಸಂತಸ ವ್ಯಕ್ತ ಪಡಿಸಿದರು. ಸಂಘದ ಚಟುವಟಿಕೆಗಳನ್ನು ತಾನು ಅರಿತಿದ್ದೇನೆ.ಮುಂಬಯಿಯಲ್ಲಿ ಕನ್ನಡ ನಾಡು ನುಡಿ, ಸಂಸ್ಕೃತಿಯ ಬೆಳವಣಿಗೆ ಕರ್ನಾಟಕ ಸಂಘ ನೀಡಿದ ಯೋಗದಾನ ಮಹತ್ವದ್ದಾಗಿದೆ. ಕಲೆ, ಸಾಹಿತ್ಯ, ಶಿಕ್ಷಣ ರಂಗಗಳಲ್ಲಿ ಒಂಬತ್ತು ದಶಕಗಳಿಂದ ಉತ್ತಮ ಸೇವೆ ಸಲ್ಲಿಸುತ್ತಾಬ್ಚಂದಿದೆ. ಸಂಘವು ಮುಂಬಯಿ ಯಲ್ಲಿ ಸಾಂಸ್ಕೃತಿಕ ಕೇಂದ್ರವಾಗಿ ಕಾರ್ಯ ನಿರ್ವಹಿಸುತ್ತಿದೆ ಎಂದು ಅಭಿಪ್ರಾಯ ಪಟ್ಟರು. ಸಂಘದ ಸಮುಚ್ಚಯ ನಿರ್ಮಾಣ ಕಾರ್ಯ ಶೀಘ್ರವಾಗಿ ಪೂರ್ತಿಯಾಗಲಿ ಎಂದು ದೇಣಿಗೆಯನ್ನು ನೀಡಿ ಮುಂದಕ್ಕೂ ತನ್ನಿಂದಾದಷ್ಟು ಸಹಕಾರ ನೀಡುತ್ತೇನೆ ಎಂದು ಭರವಸೆ ನೀಡಿದರು. ಸಂಘದ ನಿರ್ಮಾಣದ ಯೋಜನೆಯ ವಿವರಗಳನ್ನು ಪದಾಧಿಕಾರಿಗಳು ನೀಡಿದರು.

ಈ ಸಂದರ್ಭದಲ್ಲಿ ಅವರನ್ನು ಅಧ್ಯಕ್ಷ ಡಾ. ಭರತ್ ಕುಮಾರ್ ಪೊಲಿಪು, ಗೌ ಕಾರ್ಯದರ್ಶಿ ಓಂದಾಸ್ ಕಣ್ಣಂಗಾರ್ ಗೌರವಿಸಿದರು. ಕರ್ನಾಟಕ ಮಲ್ಲ ಪತ್ರಿಕೆಯ ಸಂಪಾದಕರಾದ ಚಂದ್ರಶೇಖರ ಪಾಲೆತ್ತಾಡಿ, ರಂಗನಟ, ಸದಸ್ಯರಾದ ಕೆ.ವಿ.ಆರ್ ಐತಾಳ್ ಉಪಸ್ಥಿತರಿದ್ದರು.

ಕೃಷ್ಣ ವಿ. ಶೆಟ್ಟಿ ಭೇಟಿ

ಶ್ರೇಷ್ಠ, ಹೆಸರಾಂತ ಸಮಾಜ ಸೇವಕ, ಕೊಡುಗೈ ದಾನಿ, ಪ್ರಸಿದ್ಧ ಕೃಷ್ಣ ಪ್ಯಾಲೇಸ್ ಸಮೂಹ ಹೋಟೆಲ್‌ಗಳ ಮಾಲಕರಾದ ಕೃಷ್ಣ ಶೆಟ್ಟಿಯವರು ಇತ್ತೀಚೆಗೆ ಮುಂಬಯಿ ಕನ್ನಡಿಗರ ಪ್ರಾತಿನಿಧಿಕ ಸಂಸ್ಥೆ, ಸುವರ್ಣ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಕರ್ನಾಟಕ ಸಂಘದ ನೂತನ ಸಾಂಸ್ಕೃತಿಕ ಸಮುಚ್ಚಯದ ಕಾಮಗಾರಿಯನ್ನು ವೀಕ್ಷಿಸಲು ಆಗಮಿಸಿದ್ದರು. ಕರ್ನಾಟಕ ಸಂಘದ ಬಗ್ಗೆ ಅಭಿಮಾನವನ್ನು ವ್ಯಕ್ತಪಡಿಸಿದ ಅವರು, ಸಂಘದ



ವೇದಿಕೆಯನ್ನು ಬೇರೆ ಬೇರೆ ಸಂದರ್ಭಗಳಲ್ಲಿ ಹಂಚಿ ಕೊಂಡದ್ದನ್ನು ನೆನಪಿಸಿಕೊಂಡರು. ಬಹುಕೋಟಿ ವೆಚ್ಚದ ಸಂಘದ ನೂತನ ಯೋಜನೆಯನ್ನು ನೋಡಿ ಹರ್ಷ ವ್ಯಕ್ತಪಡಿಸಿದ ಅವರು, ಆ ಬಗ್ಗೆ ಸಂಘದ ಪದಾಧಿಕಾರಿಗಳಿಂದ ಸ್ಥೂಲವಾದ ಮಾಹಿತಿಯನ್ನು ಪಡೆದು ಕೊಂಡರು.ಅಪಾರ ಜನ ಮನ್ನಣೆಯನ್ನು ಗಳಿಸಿರುವ ಕರ್ನಾಟಕ ಸಂಘದ ಈ ಮಹತ್ವದ ಸಮಾಜಪರ ಕೆಲಸಕ್ಕೆ ಸ್ವಇಚ್ಛೆಯಿಂದ ಸ್ಪಂದಿಸುವುದು ನಮ್ಮೆಲ್ಲರ ಕರ್ತವ್ಯವಾಗಿದೆ ಎಂದರು.

ಈ ಸಂದರ್ಭದಲ್ಲಿ ಸಂಘದ ಯಾವುದೇ ಗೌರವವನ್ನು ಸ್ವೀಕರಿಸದೆ, ಸಮಾಜ ಸೇವೆ ಭಗವಂತನ ಸೇವೆ ಎಂದು

ಜಾತಿ ಬೇಧ ಇಲ್ಲದೆ, ನಿಷ್ಕಲ್ಮಶ ಮನಸ್ಸಿನಿಂದ ಸಮಾಜ ಸೇವೆ ಗೈಯುತ್ತಿರುವ ಕೃಷ್ಣ ಶೆಟ್ಟಿಯವರು ಸಂಘಕ್ಕೂ ಸಹಾಯಹಸ್ತ ನೀಡಿ ಸಹಕರಿಸಿದರು. ಈ ಸಂದರ್ಭದಲ್ಲಿ ಕರ್ನಾಟಕ ಸಂಘದ ಅಧ್ಯಕ್ಷ ಡಾ. ಭರತ್ ಕುಮಾರ್ ಪೊಲಿಪು, ಗೌ ಕಾರ್ಯದರ್ಶಿ ಓಂದಾಸ್ ಕಣ್ಣಂಗಾರ್, ಕರ್ನಾಟಕ ಸಂಘಕ್ಕೆ ಸದಾ ಪ್ರೋತ್ಸಾಹವನ್ನು ನೀಡುತ್ತಾ ಬಂದಿರುವ ಹಿರಿಯ ಪತ್ರಕರ್ತ, ಚಿಂತಕ, ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಚಂದ್ರಶೇಖರ ಪಾಲೆತ್ತಾಡಿ, ಸಂಘದ ಸದಸ್ಯರಾದ ವಿಶ್ವನಾಥ್ ಶೆಟ್ಟಿ, ಸುರೇಶ್ ಕುಂದರ್, ಪಿಎಂಸಿ ಮಿಲಿಂದ್‌ರವರು ಉಪಸ್ಥಿತರಿದ್ದರು.

ಪಿ. ವಿ. ಶೆಟ್ಟಿ ಭೇಟಿ

ಈ ಬಾರಿಯ ಕರ್ನಾಟಕ ಸರ್ಕಾರದ ವತಿಯಿಂದ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾದ ಮುಂಬಯಿಯ ಪ್ರಸಿದ್ಧ ಸಮಾಜ ಸೇವಕರು, ಮುಂಬಯಿ ಕ್ರಿಕೆಟ್ ಅಸೋಸಿಯೇಷನ್‌ನ ಮಾಜಿ ಜೊತೆ ಕೋಶಾಧಿಕಾರಿ ಹಾಗೂ ಬಂಟರ ಸಂಘದ ಮಾಜಿ ಅಧ್ಯಕ್ಷ ರಾದ ಡಾ. ಪಿ ವಿ ಶೆಟ್ಟಿ ಯವರನ್ನು ಮುಂಬಯಿ ಕನ್ನಡಿಗರ ಪ್ರಾತಿನಿಧಿಕ ಸಂಸ್ಥೆ, ಸುವರ್ಣ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಕರ್ನಾಟಕ ಸಂಘ ಮುಂಬಯಿ ವತಿಯಿಂದ ಇತೀಚೆಗೆ ಗೌರವಿಸಲಾಯಿತು.



ಈ ಸಂದರ್ಭದಲ್ಲಿ ಕರ್ನಾಟಕ ಸಂಘದ ಸಾಂಸ್ಕೃತಿಕ ಸಮುಚ್ಚಯದ ಯೋಜನೆಯ ವಿವರವನ್ನು ನೀಡಲಾಯಿತು. ಪ್ರಸ್ತುತ ಯೋಜನೆಗೆ ತಾನು ಸಹಕರಿಸುವುದಾಗಿ ಭರವಸೆ ನೀಡಿದರು. ಮನುಷ್ಯ ತನ್ನ ಜೀವಿತಾವಧಿಯಲ್ಲಿ ಸಾಧ್ಯವಾದಷ್ಟು ಜನಸೇವೆ ಮಾಡಬೇಕು ಎಂಬ ತತ್ವದಲ್ಲಿ ನಾನು ನಂಬಿಕೆ ಇರಿಸಿಕೊಂಡು ಅದರಲ್ಲಿ ತೊಡಗಿಸಿಕೊಂಡಿದ್ದೇನೆ. ಮನುಷ್ಯನಿಗೆ ವಿದ್ಯಾಭ್ಯಾಸ ಅತೀ ಅಗತ್ಯ. ಶಿಕ್ಷಣಕ್ಕೆ ಸದಾ ನೆರವು ನೀಡುವುದು ಬಹು ಮುಖ್ಯವಾಗಿದೆ. ಆ ಮೂಲಕ ಮುಂದಿನ ಜನಾಂಗವನ್ನು ರೂಪಿಸಬೇಕಾಗಿದೆ ಎಂದು ನನ್ನ ತಂದೆ ಹೇಳುತಿದ್ದರು. ಅದನ್ನು ನಾನು ಪಾಲಿಸುತಿದ್ದೇನೆ. ಸಂಘ ಸಂಸ್ಥೆಗಳು ಸಂಸ್ಕೃತಿ, ವೈದ್ಯಕೀಯ,, ಮತ್ತು ಶಿಕ್ಷಣಕ್ಕೆ

ಮೊದಲ ಆದ್ಯತೆಯನ್ನು ನೀಡಬೇಕು. ಜೊತೆಗೆ ಕನ್ನಡ ಭಾಷೆಯ ಬೆಳವಣಿಗೆಗೂ ದುಡಿಯಬೇಕು ಎಂಬ ಆಶಯವನ್ನು ವ್ಯಕ್ತ ಪಡಿಸಿದರು.ಕರ್ನಾಟಕ ಸಂಘ ಆ ನಿಟ್ಟಿನಲ್ಲಿ ಕಾರ್ಯವೆಸಗುತ್ತಿರುವುದು ಶ್ಲಾಘನೀಯವಾಗಿದೆ ಎಂದರು. ಅವರನ್ನು ಕರ್ನಾಟಕ ಸಂಘದ ಅಧ್ಯಕ್ಷರಾದ ಡಾ.ಭರತ್ ಕುಮಾರ್ ಗೌ ಕಾರ್ಯದರ್ಶಿ ಓಂದಾಸ್ ಕಣ್ಣಂಗಾರ್ ಶಾಲು ಮತ್ತು ಪುಷ್ಪ ಗೌರವ ನೀಡಿ ಗೌರವಿಸಿದರು.

ಈ ಸಂದರ್ಭದಲ್ಲಿ ಸಂಘದ ಹಿತೈಷಿಗಳಾದ ಸಂಘಟಕ,ಅಶೋಕ ಸಸಿಹಿತ್ಲು ಮತ್ತು ಸಾಹಿತಿ ಹರೀಶ್ ಹೆಜ್ಮಾಡಿ ಉಪಸ್ಥಿತರಿದ್ದರು.

ಕರ್ನಾಟಕ ಸಂಘದ ಆವರಣಕ್ಕೆ ಮುಂಬೈ ವಿಶ್ವವಿದ್ಯಾಲಯ ಕನ್ನಡ ವಿಭಾಗದ ಸದಸ್ಯರ ಭೇಟಿ, ಸಂವಾದ ಕಾರ್ಯಕ್ರಮ

ಹೊರನಾಡಿನಲ್ಲಿ ಕನ್ನಡ– ಕನ್ನಡಿಗ– ಕರ್ನಾಟಕ ಈ ತತ್ವಗಳ ಬಲವರ್ಧನೆಗೆ ಕರ್ನಾಟಕ ಸಂಘ ಕೊಟ್ಟ ಕೊಡುಗೆ ದೊಡ್ಡದು: ಪ್ರೊ. ಜಿ. ಎನ್. ಉಪಾಧ್ಯ.

ಕರ್ನಾಟಕ ಸಂಘ ಮುಂಬೈ ಕನ್ನಡಿಗರ ಹೆಮ್ಮೆಯ, ಹಿರಿಯ ಸಂಸ್ಥೆಗಳಲ್ಲಿ ಮುಂಚೂಣಿಯಲ್ಲಿ ಇದೆ. ಕಳೆದ ಒಂಬತ್ತು ದಶಕಗಳಿಗೂ ಮಿಕ್ಕ ಅವಧಿಯಲ್ಲಿ ಈ ಸಂಸ್ಥೆ ಮಾಡಿದ ಕನ್ನಡ ಕಾಯಕ, ಸಾಂಸ್ಕೃತಿಕ ಪರಿಚಾರಿಕೆ ನಾಡಿಗೆ ಮಾದರಿಯಾಗಿದೆ. ಹೊರನಾಡಿನಲ್ಲಿ ಕನ್ನಡ–ಕನ್ನಡಿಗ– ಕರ್ನಾಟಕ ಈ ತತ್ವಗಳ ಬಲವರ್ಧನೆಗೆ ಕರ್ನಾಟಕ ಸಂಘ ಕೊಟ್ಟ ಕೊಡುಗೆ ದೊಡ್ಡದು. ಕರ್ನಾಟಕ ಸಂಘದ ಹೊಸ ಕಟ್ಟಡ ತಲೆಯೆತ್ತಿ ನಿಲ್ಲುತ್ತಿರುವ ಈ ಹೊತ್ತಿನಲ್ಲಿ ಸಮಸ್ತ



ಮುಂಬೈ ಕನ್ನಡಿಗರು ಸಂಘದ ಬೆಂಬಲಕ್ಕೆ ನಿಲ್ಲಬೇಕಾದದ್ದು, ಯಥಾಸಾಧ್ಯ ಆರ್ಥಿಕ ಸಹಾಯವನ್ನು ಮಾಡಬೇಕಾದದ್ದು ಎಲ್ಲರ ಕರ್ತವ್ಯ. ಇವತ್ತು ವಿಭಾಗದ ವಿದ್ಯಾರ್ಥಿಗಳೊಂದಿಗೆ ಹೊಸದಾಗಿ ತಲೆ ಎತ್ತುತ್ತಿರುವ ಸಂಘದ ಆವರಣವನ್ನು ನೋಡಿ ಮನಸ್ಸು ತುಂಬಿ ಬಂತು. ಆದಷ್ಟು ಬೇಗ ಈ ಕಟ್ಟಡದ ಕೆಲಸ ಮುಗಿಯುವಂತಾಗಲಿ. ಅದರ ಹಿಂದಿನ ವೈಭವ ಮತ್ತೆ ಮರುಕಳಿಸಲಿ ಎಂದು ಕನ್ನಡ ವಿಭಾಗ ಮುಂಬೈ ವಿಶ್ವವಿದ್ಯಾಲಯದ ಪ್ರಾಧ್ಯಾಪಕ ಮತ್ತು ಮುಖ್ಯಸ್ಥ ಪ್ರೊ. ಜಿ. ಎನ್. ಉಪಾಧ್ಯ ಅವರು ಶುಭ ಹಾರೈಸಿದರು.

ಅವರು ಮಾ. 1ರಂದು ರವಿವಾರ ಮಧ್ಯಾಹ್ನ ಕರ್ನಾಟಕ ಸಂಘದ ಆವರಣಕ್ಕೆ ಮುಂಬೈ ವಿಶ್ವವಿದ್ಯಾಲಯ ಕನ್ನಡ ವಿಭಾಗದ ವಿದ್ಯಾರ್ಥಿಗಳೊಂದಿಗೆ ಭೇಟಿ ನೀಡಿದರು. ರಾಷ್ಟ್ರೀಯ ಶಿಕ್ಷಣ ನೀತಿ 2020 ಯೋಜನೆಯ



ಅನ್ವಯ ಸಮುದಾಯದ ಕಡೆಗೆ ನಮ್ಮ ನಡಿಗೆ ಎಂಬ ನೆಲೆಯಲ್ಲಿ ಈ ಭೇಟಿಯನ್ನು ಆಯೋಜಿಸಲಾಗಿತ್ತು.

ಅವರು ಕರ್ನಾಟಕ ಸಂಘದ ಪದಾಧಿಕಾರಿಗಳೊಂದಿಗೆ ಮಾತನಾಡುತ್ತಾ ಒಂದು ಊರಿಗೆ ಮಹತ್ವ ಬರುವುದು ಅಲ್ಲಿರುವ ಸಂಘ ಸಂಸ್ಥೆಗಳಿಂದ, ವ್ಯಕ್ತಿಗಳಿಂದ ಮತ್ತು ಸ್ಮಾರಕಗಳಿಂದ. ಮುಂಬೈ ಕನ್ನಡಿಗರ ಮಾತೃ ಸಂಸ್ಥೆಯಂತೆ ಕರ್ನಾಟಕ ಸಂಘ ಕೆಲಸ ಮಾಡಿದೆ.

ಮುಂಬೈ ವಿವಿ ಕನ್ನಡ ವಿಭಾಗದ ಸ್ಥಾಪನೆಯಲ್ಲಿಯೂ ಕರ್ನಾಟಕ ಸಂಘ ಮಹತ್ವದ ಪಾತ್ರವನ್ನು ವಹಿಸಿದೆ. ಸದ್ಯ ಕರ್ನಾಟಕ ಸಂಘದ ಕಟ್ಟಡ ಕಾಮಗಾರಿ ಭರದಿಂದ ಸಾಗಿದೆ. 21ನೆಯ ಶತಮಾನದಲ್ಲಿ ಕನ್ನಡವನ್ನು ಹೊಸ ತಲೆಮಾರಿಗೆ ದಾಟಿಸುವ ನಿಟ್ಟಿನಲ್ಲಿ ಇಂತಹ ಸಂಸ್ಥೆಗಳು ಮುಂಬೈಗೆ ತೀರಾ ಅನಿವಾರ್ಯ. ಸಂಘದ ಕನ್ನಡ ಕಾಯಕಕ್ಕೆ ಮುಂಬೈ ವಿಶ್ವವಿದ್ಯಾಲಯ ಸದಾ ಬೆಂಬಲವಾಗಿ ನಿಲ್ಲುತ್ತದೆ ಎಂದು ಈ ಸಂದರ್ಭದಲ್ಲಿ ಅವರು ಕಟ್ಟಡ ಕಾಮಗಾರಿಯ ಬಗೆಗೆ ಮೆಚ್ಚುಗೆ ವ್ಯಕ್ತಪಡಿಸಿದರು.

ಕರ್ನಾಟಕ ಸಂಘವು ಒಂಬತ್ತು ದಶಕಗಳಿಂದ ಸಾಂಸ್ಕೃತಿಕವಾಗಿ ಸಾಹಿತ್ಯಕವಾಗಿ ಉನ್ನತ ಮಟ್ಟದ ಕಾರ್ಯಕ್ರಮಗಳನ್ನು ಮಾಡುತ್ತಾ ಸಾಂಸ್ಕೃತಿಕ ಕೇಂದ್ರವಾಗಿ ರೂಪುಗೊಂಡಿದೆ. ಅದು ಜಾತ್ಯತೀತ ವಿನ್ಯಾಸದಲ್ಲಿ ಕ್ರಿಯಾಶೀಲವಾಗಿದೆ. ಮುಂಬಯಿ ಕನ್ನಡಿಗರ ಯಾವುದೇ ಚಟುವಟಿಕೆಗಳಿಗೆ ನಿರಂತರ ಪ್ರೋತ್ಸಾಹ ನೀಡುತ್ತಾ ಬಂದಿದೆ. ಪ್ರಸ್ತುತದ ಸಾಂಸ್ಕೃತಿಕ ಸಮುಚ್ಚಯದ ನಿರ್ಮಾಣದ ಕಾರ್ಯಕ್ಕೆ ಎಲ್ಲ ತುಳು ಕನ್ನಡಿಗರು ಪ್ರೀತಿಯಿಂದ ಮುಕ್ತ ಮನಸ್ಸಿನಿಂದ ಸಹಕಾರ ನೀಡಬೇಕೆಂದು ವಿನಂತಿಸುತ್ತೇವೆ. ಮುಂಬಯಿ ವಿ. ವಿ. ಕನ್ನಡ ವಿಭಾಗದ ಮುಖ್ಯಸ್ಥರಾದ ಡಾ. ಜಿ. ಎನ್ ಉಪಾಧ್ಯರು, ಸಹಾಯಕ ಪ್ರಾಧ್ಯಾಪಕಿ ಡಾ. ಪೂರ್ಣಿಮಾ ಶೆಟ್ಟಿ ಅವರು ಹಾಗೂ ಎಂ. ಎ. ಮತ್ತು ಸಂಶೋಧನ ವಿದ್ಯಾರ್ಥಿಗಳು ನಿರ್ಮಾಣ ಸ್ಥಳಕ್ಕೆ ಭೇಟಿ ನೀಡಿದ್ದು ತುಂಬ ಸಂತಸ ತಂದಿದೆ ಎಂದು ಅಧ್ಯಕ್ಷ ಡಾ. ಭರತ್ ಕುಮಾರ್ ಪೊಲಿಪು ನುಡಿದರು.

ಹೊರನಾಡಿನಲ್ಲಿ ಕನ್ನಡ ಮನಸ್ಸುಗಳನ್ನು ಕಟ್ಟಿದ ಮತ್ತು ಸಾವಿರಾರು ಕಲಾವಿದರ ಬಾಳು ಬೆಳಗಿಸಿದ ಕರ್ನಾಟಕ ಸಂಘವು ನಮ್ಮ ಪಾಲಿಗೆ ದೇಗುಲವಾಗಿದ್ದು ಅದರ ನಿರ್ಮಾಣವೇ ನಮ್ಮ ಕನಸಾಗಿದೆ.

ಇಂತಹ ಮಹಾನ್ ಸಂಸ್ಥೆಯ ನೂತನ ಸಾಂಸ್ಕೃತಿಕ ಸಮುಚ್ಚಯದ ಕಾಮಗಾರಿಯು ಒಂದು ಹಂತವನ್ನು ತಲುಪಿದ್ದು ನಮ್ಮಲ್ಲಿ ಒಂದಿಷ್ಟು ಸಮಾಧಾನವನ್ನು ತಂದಿದೆ. ಈ ಕಾರ್ಯ ಈ ಹಂತವನ್ನು ಮುಟ್ಟಲು ದೇವರ ದಯೆ ಮತ್ತು ಹೃದಯವಂತ ಮನಸ್ಸುಗಳು ನೀಡಿದ ದೇಣಿಗೆಯ ಸಹಾಯದಿಂದಲೇ ಸಾಧ್ಯವಾಗಿದೆ. ಇನ್ನುಳಿದ



ಕಟ್ಟಡದ ಮೊದಲನೆಯ ಹಂತದ ಕಾಮಗಾರಿಯನ್ನು ಅದಷ್ಟು ಬೇಗ ಪೂರ್ಣಗೊಳಿಸಿ ಕಟ್ಟಡವನ್ನು ಲೋಕಾರ್ಪಣೆ ಗೊಳಿಸುವುದು ನಮ್ಮ ಧ್ಯೇಯವಾಗಿದೆ. ಈ ಸಂದರ್ಭದಲ್ಲಿ ಕಾಮಗಾರಿಯನ್ನು ವೀಕ್ಷಿಸಿದ ಇನ್ನಷ್ಟು ಜನರು ನಮ್ಮೊಂದಿಗೆ ಕೈ ಜೋಡಿಸುವ ಭರವಸೆಯನ್ನು ನೀಡಿದ್ದು, ನಮ್ಮ ಆತ್ಮವಿಶ್ವಾಸವನ್ನು ಹೆಚ್ಚಿಸಿದೆ.

ಇಂದು ಸಂಘದ ಮೇಲಿನ ಪ್ರೀತಿ, ಅಭಿಮಾನದಿಂದ ತಾವೆಲ್ಲರು ಬಂದು ಕಾಮಗಾರಿಯನ್ನು ಕಣ್ಣಾರೆ ವೀಕ್ಷಿಸಿದ್ದು, ನಮಗೆ ಸಂತೋಷ ತಂದಿದೆ. ಸಹೃದಯರಾದ ತಮಗೆಲ್ಲರಿಗೂ ಕರ್ನಾಟಕ ಸಂಘದ ವತಿಯಿಂದ ವಂದನೆಗಳನ್ನು ಅರ್ಪಿಸುತ್ತೇನೆ ಎಂದು ಕರ್ನಾಟಕ ಸಂಘದ ಗೌ. ಕಾರ್ಯದರ್ಶಿ ಓಂದಾಸ್ ಕಣ್ಣಂಗಾರ್ ಹೇಳಿದರು.

ವಿಭಾಗದ ಸಹಾಯಕ ಪ್ರಾಧ್ಯಾಪಕರಾದ ಡಾ. ಪೂರ್ಣಿಮಾ ಸುಧಾಕರ ಶೆಟ್ಟಿ ಅವರು ಮಾತನಾಡುತ್ತಾ, ಕರ್ನಾಟಕ ಸಂಘ ಸದಾ ಒಂದಲ್ಲ ಒಂದು ಚಟುವಟಿಕೆಗಳಿಂದ ಕೂಡಿದ್ದ ಸಂಸ್ಥೆ. ಮಹಾನಗರದಲ್ಲಿ ಕನ್ನಡ ಭಾಷೆ, ಕಲೆ ಮತ್ತು ಸಂಸ್ಕೃತಿಯನ್ನು ಜೀವಂತವಾಗಿರಿಸಿ ಸದಾ ಕ್ರಿಯಾಶೀಲವಾಗಿದ್ದ ಈ ಸಂಘವು ಪ್ರಸ್ತುತ ಕಟ್ಟಡ ಪುನರ್ನಿರ್ಮಾಣಗೊಳ್ಳುತ್ತಿದ್ದು, ಆಧುನಿಕ ಸ್ಪರ್ಶದೊಂದಿಗೆ ಸಜ್ಜಾಗುತ್ತಿರುವುದನ್ನು ನೋಡಿ ಸಂತೋಷವಾಗಿದೆ. ಮಾತುಂಗಾ ಕರ್ನಾಟಕ ಸಂಘದ ಈ ಮಹತ್ವಾಕಾಂಕ್ಷೆಯ ಯೋಜನೆಯು ಪೂರ್ಣಗೊಳ್ಳಲು ಸಮಾಜದ ಪ್ರತಿಯೊಬ್ಬ ಕನ್ನಡಿಗರ ಬೆಂಬಲ ಅಗತ್ಯ ಎಂದು ನುಡಿದರು.

ವಿಭಾಗದ ಸಂಶೋಧನ ವಿದ್ಯಾರ್ಥಿ ಅನಿತಾ ಪೂಜಾರಿ ತಾಕೋಡೆ ಅವರು ಮಾತನಾಡಿ ಕರ್ನಾಟಕ ಸಂಘ ಮುಂಬಯಿಯಲ್ಲಿ ನೆಲೆಸಿರುವ ತುಳು ಕನ್ನಡಿಗರಿಗೆ ತವರೂರಿನ ಪ್ರೀತಿಯನ್ನು ಉಣಿಸುತ್ತಿತ್ತು. ನಿತ್ಯನಿರಂತರವಾಗಿ ಸಾಹಿತ್ಯ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯುತ್ತಿರುವ ಸುಸಂಸ್ಕೃತ ತಾಣ ಇದಾಗಿತ್ತು. ಸದಾ ಬಾಗಿಲನ್ನು ತೆರೆದಿಟ್ಟು ಎಲ್ಲರನ್ನೂ ಆದರದಿಂದ ಸ್ವಾಗತಿಸುತ್ತಿದ್ದ ಈ ಸಂಘದಲ್ಲಿ ತಮ್ಮ ಕಷ್ಟ ಸುಖಗಳನ್ನು ಹಂಚಿಕೊಂಡು ಸಂಭ್ರಮಿಸುವವರನ್ನು ನೋಡುವುದರಲ್ಲಿ ಒಂದು ರೀತಿಯ ಚಂದವಿತ್ತು. ನನ್ನ ಚೊಚ್ಚಲ ಕವನ ಸಂಕಲನ 'ಕಾಯುತ್ತ ಕವಿತೆ' ಇದೇ ಮಾಟುಂಗ ಕರ್ನಾಟಕ ಸಂಘದಲ್ಲಿ ಅದ್ಧೂರಿಯಿಂದ ಬಿಡುಗಡೆಗೊಂಡಿತ್ತು. ಬಿಡುಗಡೆಯ ಎಲ್ಲಾ ಜವಾಬ್ದಾರಿಯನ್ನು ಸಂಘವೇ ವಹಿಸಿಕೊಂಡಿತ್ತು. ಅದೆಷ್ಟೋ ಮಂದಿಯ ಪ್ರತಿಭೆಗಳು ಅರಳಿದ್ದು, ಕೃತಿಗಳು

ಬೆಳಕು ಕಂಡಿದ್ದು, ವೇದಿಕೆಗಳು ಒದಗಿ ಬಂದಿದ್ದು, ಯಶಸ್ಸಿನ ಶಿಖರವೇರುವಲ್ಲಿ ಮೊದಲ ಮೆಟ್ಟಿಲಾಗಿದ್ದು ಕರ್ನಾಟಕ ಸಂಘ. ಕೆಲವು ವರ್ಷಗಳಿಂದ ಈ ಸಂಘದ ನವನಿರ್ಮಾಣದ ಕಾರ್ಯ ನಡೆಯುತ್ತಿದೆ. ಇನ್ನು ಕೆಲವೇ ತಿಂಗಳಲ್ಲಿ ಹೊಸರೂಪಿನಲ್ಲಿ ನಮ್ಮೆದುರು ಕಂಗೊಳಿಸಲಿದೆ. ಹಳೆಯ ಅವಿಸ್ಮರಣೀಯ ನೆನಪುಗಳು ತಾಜಾತನಗೊಳ್ಳುವ ಹುಮ್ಮಸ್ಸಿನಲ್ಲಿದೆ. ಸಂಘದಲ್ಲಿ ಮತ್ತೆ ಮೊದಲಿನಂತೆ ಕನ್ನಡದ ಕಂಪು ಮೇಳೈಸಬೇಕು, ಇದಕ್ಕಾಗಿ ನಾವೆಲ್ಲರೂ ಜೊತೆಯಾಗೋಣ ವಿಶಾಲ ಮನೋಭಾವದಿಂದ ಸಹಕರಿಸೋಣ ಎಂದು ಸಂಘದೊಂದಿಗಿನ ತಮ್ಮ ಒಡನಾಟವನ್ನು ನೆನಪಿಸಿಕೊಂಡರು.

ವಿಭಾಗದ ಇನ್ನೋರ್ವ ಸಂಶೋಧನ ವಿದ್ಯಾರ್ಥಿ ಸುರೇಖಾ ಶೆಟ್ಟಿ ಅವರು ಮಾತನಾಡಿ ಕರ್ನಾಟಕ ಸಂಘದ ಬಗೆಗೆ ನಾನು ಮುಂಬೈ ವಿಶ್ವವಿದ್ಯಾಲಯಕ್ಕೆ ವಿದ್ಯಾರ್ಜನೆಗಾಗಿ ಬಂದ ಮೇಲೆ ತಿಳಿದುಕೊಂಡೆ. ಆ ಸಮಯದಲ್ಲಿ ಕನ್ನಡ ವಿಭಾಗದ ವಿದ್ಯಾರ್ಥಿಗಳಿಗೆ ಈ ಸಂಘದ ಮೂಲಕ ಪ್ರೋತ್ಸಾಹ ಸಿಗುತ್ತಿತ್ತು. ಈಗ ಸಂಘದ ನವನಿರ್ಮಾಣ ಕಾರ್ಯದಲ್ಲಿ ನಾವೆಲ್ಲರೂ ಜೊತೆಯಾಗಿ ಸಹಕರಿಸೋಣ ಎಂದು ತಮ್ಮ ಮನದ ಅನಿಸಿಕೆಯನ್ನು ವ್ಯಕ್ತಪಡಿಸಿದರು. ಸುಶೀಲಾ ದೇವಾಡಿಗ ಅವರು ಸಂಘದ ಹೆಜ್ಜೆ ಹಾದಿಯನ್ನು ವಿವರಿಸಿದರು. ಕರ್ನಾಟಕ ಸಂಘದ ಸಾಧನೆಯನ್ನು ಕೃತಿ ರೂಪದಲ್ಲಿ ತರುವ ಪ್ರಯತ್ನ ನಡೆಸಿರುವುದಾಗಿ ಸಭೆಗೆ ತಿಳಿಸಿದರು.

ಇದೇ ಸಂದರ್ಭದಲ್ಲಿ ವಿಭಾಗದ ಸ್ನಾತಕೋತ್ತರ ವಿದ್ಯಾರ್ಥಿಗಳಾದ ದಯಾಶಶಿ, ಸುಮಿತ್ರಾ ಗೌಡ, ಮಮತಾ ಕುಕ್ಯಾನ್, ಭೀಮರಾಯ ಚಿಲಕ ಮೊದಲಾದವರು ಸಮಯೋಚಿತವಾಗಿ ಮಾತನಾಡಿದರು. ಡಾ. ಪೂರ್ಣಿಮಾ ಶೆಟ್ಟಿ ಅವರು ಕಾರ್ಯಕ್ರಮ ನಿರೂಪಿಸಿದರು. ಸುಶೀಲಾ ದೇವಾಡಿಗ ಅವರು ವಂದಿಸಿದರು

ಉದಯ ಶೆಟ್ಟಿ (ಸಾಯಿ ಪ್ಯಾಲೇಸ್) ಭೇಟಿ

ನಗರದ ಪ್ರತಿಷ್ಠಿತ ಉದ್ಯಮಿ, ಹೆಸರಾಂತ ಸಮಾಜ ಸೇವಕ, ಸಾಯಿರಾಧಾ ಸಮೂಹ ಸಂಸ್ಥೆಗಳ ಒಡೆತನದ ಮಾಲಕರೋರ್ವರಾದ ಶ್ರೀಯುತ ಉದಯ ಶೆಟ್ಟಿಯವರನ್ನು ಮುಂಬಯಿ ಕನ್ನಡಿಗರ ಪ್ರಾತಿನಿಧಿಕ ಸಂಸ್ಥೆ, ಸುವರ್ಣ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಕರ್ನಾಟಕ ಸಂಘದ ವತಿಯಿಂದ ಅವರ ಮಾಲಕತ್ವದ ಅಂಧೇರಿಯ ಸಾಯಿ ಪ್ಯಾಲೇಸ್ ಹೋಟೆನಲ್ಲಿ ಭೇಟಿ ಮಾಡಲಾಯಿತು.

ಶಿಕ್ಷಣ, ಧಾರ್ಮಿಕತೆ, ಸಾಹಿತ್ಯ, ಕಲೆ, ಸಂಸ್ಕೃತಿಯ ಬಗ್ಗೆ ಅಪಾರ ಪ್ರೀತಿ, ಅಸಕ್ತಿ, ಅಭಿಮಾನವಿರುವ ಉದಯಣ್ಣರವರು, ಕರ್ನಾಟಕ ಸಂಘದ ಕಾರ್ಯ ಚಟುವಟಿಕೆಗಳು ಮತ್ತು ನೂತನ ಸಾಂಸ್ಕೃತಿಕ ಸಮುಚ್ಚಯದ ಯೋಜನೆ ಬಗ್ಗೆ ತಿಳಿದು ಸಂತೋಷ ವ್ಯಕ್ತ ಪಡಿಸಿದರು. ರವಿಯಣ್ಣ ಮತ್ತು ಉದಯಣ್ಣರವರು ಸಮಾಜದ ಯಾವುದೇ ಒಳ್ಳೆಯ ಕೆಲಸವಿದ್ದರೂ, ಅದಕ್ಕೆ ಸ್ಪಂದಿಸುವ ಗುಣಧರ್ಮವನ್ನು ಹೊಂದಿದ್ದು, ಅದಕ್ಕೆ ಅವರ ನಿಸ್ವಾರ್ಥ ಸಮಾಜ ಸೇವೆಯೇ ಸಾಕ್ಷಿಯಾಗಿದೆ.

ಸಮಾಜಕ್ಕೆ ಒಳ್ಳೆಯ ಮಾರ್ಗದರ್ಶನವನ್ನು ನೀಡುವ ವ್ಯಕ್ತಿತ್ವವನ್ನು ಹೊಂದಿರುವ ರವಿ (ಶೆಟ್ಟಿ)ಯಣ್ಣರವರು ಓರ್ವ ನಿರ್ಮಲ ಮನಸ್ಸಿನವರಾಗಿದ್ದು, ಕರ್ನಾಟಕ ಸಂಘಕ್ಕೂ ಸೂಕ್ತ ಸಲಹೆ, ಮಾರ್ಗದರ್ಶನವನ್ನು ನೀಡಿ ಪ್ರೋತ್ಸಾಹಿಸುತ್ತಿದ್ದಾರೆ ಎಂದು ಕರ್ನಾಟಕ ಸಂಘದ ಗೌ ಕಾರ್ಯದರ್ಶಿ ಓಂದಾಸ್ ಕಣ್ಣಂಗಾರ್ ತಿಳಿಸಿದರು. ರವಿ ಶೆಟ್ಟಿ ಅವರ ಮುತುವರ್ಜಿಯ ಮೇರೆಗೆ ಸ್ಪಂದಿಸಿದ ಉದಯಣ್ಣರವರು ಕರ್ನಾಟಕ ಸಂಘಕ್ಕೆ ದೇಣಿಗೆಯನ್ನು ನೀಡಿ ಸಹಕರಿಸಿ, ಶುಭವನ್ನು ಹಾರೈಸಿದರು.



ಈ ಸಂದರ್ಭದಲ್ಲಿ ಅವರ ತಂದೆಯವರು ಅಡಿಪಾಯ ಹಾಕಿಕೊಟ್ಟ ಸಣ್ಣ ಹೋಟೆಲ್ ಉದ್ಯಮವನ್ನು ,ಸಾಯಿ ರಾಧಾ ಸಮೂಹ ಸಂಸ್ಥೆಗಳಾಗಿ ಕಟ್ಟಿ, ಬ್ರಹತ್ ಮಟ್ಟದಲ್ಲಿ ಬೆಳೆಸಿ, ಅದನ್ನೊಂದು 'ಬ್ರಾಂಡ್' ಆಗಿ ಲೋಕ ಪ್ರಸಿದ್ಧಿಯನ್ನುಗೊಳಿಸಿದ ಮಹಾ ಸಾಧನೆಗಾಗಿ, ಕರ್ನಾಟಕ ಸಂಘದ ವತಿಯಿಂದ ಸಂಘದ ಗೌ ಕಾರ್ಯದರ್ಶಿ ಓಂದಾಸ್ ಕಣ್ಣಂಗಾರ್ ಶಾಲು ಹೊದಿಸಿ, ನೂತನ ಸಮುಚ್ಚಯದ ಕಿರು ಹೊತ್ತಿಗೆಯನ್ನು ನೀಡಿ ಗೌರವಿಸಿ ಅಭಿನಂದಿಸಿದರು. ಅವರೊಂದಿಗೆ ಕರ್ನಾಟಕ ಸಂಘದ ಸದಸ್ಯರಾದ, ಸಂಘಟಕ ಅಶೋಕ್ ಸಸಿಹಿತ್ಲು, ವಿಶ್ವನಾಥ ಶೆಟ್ಟಿ, ಎಕ್ಕಾರು ಉಪಸ್ಥಿತರಿದ್ದರು.

ಅನಿಲ್ ಶೆಟ್ಟಿ ಏಳಿಂಜೆ ಭೇಟಿ

ಮುಂಬಯಿ ಕನ್ನಡಿಗರ ಪ್ರಾತಿನಿಧಿಕ ಸಂಸ್ಥೆ, ಸುವರ್ಣ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಕರ್ನಾಟಕ ಸಂಘದ ಮಹತ್ವಾಕಾಂಕ್ಷೆಯ ನೂತನ ಸಾಂಸ್ಕೃತಿಕ ಸಮುಚ್ಚಯದ ಕಾಮಗಾರಿಯನ್ನು ವೀಕ್ಷಿಸಲು ಹೆಸರಾಂತ



ಸಮಾಜ ಸೇವಕ ಉದ್ಯಮಿ ಅನಿಲ್ ಶೆಟ್ಟಿ ಏಳಿಂಜೆ ಅವರು ಇತ್ತೀಚೆಗೆ ಭೇಟಿ ನೀಡಿದರು.

ತುಂಬ ವರ್ಷಗಳಿಂದಲೂ ನಾನು ಕರ್ನಾಟಕ ಸಂಘದ ಕಾರ್ಯ ಚಟುವಟಿಕೆಗಳನ್ನು ಬಹಳ ಹತ್ತಿರದಿಂದ ಗಮನಿಸುತ್ತಾ ಬಂದಿದ್ದೇನೆ. ಅಲ್ಲದೆ ಬೇರೆ ಬೇರೆ ಸಂದರ್ಭಗಳಲ್ಲಿ ಕಾರ್ಯಕ್ರಮಗಳಲ್ಲಿ ವೇದಿಕೆಯನ್ನು ಹಂಚಿ ಕೊಂಡಿದ್ದೇನೆ. ಭರತನಾಟ್ಯ ಕಲಾವಿದೆಯಾದ ನನ್ನ ಮಗಳ ಆರೆಗ್ರೇಟಂ ಕಾರ್ಯಕ್ರಮವು ಸಂಘದ ವೇದಿಕೆಯಲ್ಲಿ ಬಹಳ ವಿಜೃಂಭಣೆಯಿಂದ ಜರಗಿದ್ದು ತುಂಬ ಸಂತೋಷವನ್ನು ನೀಡಿದೆ. ಹೊರನಾಡಿನಲ್ಲಿ ಕನ್ನಡ ನಾಡು ನುಡಿಯನ್ನು ಉಳಿಸಿ ಬೆಳೆಸುವಲ್ಲಿ ಕರ್ನಾಟಕ ಸಂಘದ ಕೊಡುಗೆ ಮಹತ್ತರವಾದುದು. ಆ ನಿಟ್ಟಿನಲ್ಲಿ ಸಂಘವು ಈಗ ಹಮ್ಮಿಕೊಂಡಿರುವ ನೂತನ ಸಾಂಸ್ಕೃತಿಕ ಸಮುಚ್ಚಯದ ಯೋಜನೆಯು ತುಂಬ ಮಹತ್ವದಾಗಿದ್ದು, ಅದಕ್ಕೆ ಸಹಾಯಹಸ್ತ ನೀಡುವುದು ಓರ್ವ ಕನ್ನಡಿಗನಾಗಿ ನನ್ನ ಕರ್ತವ್ಯವಾಗಿದೆ ಎಂದ ಅನಿಲ್ ಶೆಟ್ಟಿಯವರು ದೇಣಿಗೆಯನ್ನು ನೀಡಿ, ಕೆಲಸವು ಅದಷ್ಟು ಬೇಗ ಪೂರ್ಣಗೊಳ್ಳಲಿ ಎಂದು ಶುಭ ಹಾರೈಸಿದರು.

ಡಾ. ಬೆಳ್ಳೂರು ಸುಂದರ್ ಶೆಟ್ಟಿ ಭೇಟಿ

ಕರ್ನಾಟಕ ಸಂಘದ ನೂತನ ಸಾಂಸ್ಕೃತಿಕ ಸಮುಚ್ಚಯದ ಕಾಮಗಾರಿಯನ್ನು ವೀಕ್ಷಿಸಲು ಆಗಮಿಸಿದ ಹಿರಿಯ ಹೆಸರಾಂತ ವೈದ್ಯ ಡಾ. ಬೆಳ್ಳೂರು ಸುಂದರ್ ಶೆಟ್ಟಿ ಕರ್ನಾಟಕ ಸಂಘದ ನೂತನ ಸಾಂಸ್ಕೃತಿಕ ಸಮುಚ್ಚಯದ ಕಾಮಗಾರಿಯನ್ನು ವೀಕ್ಷಿಸಿ ನಿಜವಾಗಿಯೂ ತುಂಬ ಸಂತೋಷ ಆಗಿದೆ. ಇದೊಂದು ಬೃಹತ್ ಯೋಜನೆಯಾಗಿದ್ದು, ಕನ್ನಡಿಗರೆಲ್ಲರೂ ಅಭಿಮಾನ ಪಡುವಂತಹ ಈ ಕೆಲಸವನ್ನು ನೀವು ಮಾಡುತ್ತಿರುವುದು ಮೆಚ್ಚುವಂತದ್ದು. ಮುಂಬಯಿ ನಗರದಲ್ಲಿ ಕಳೆದ 53 ವರ್ಷಗಳಿಂದ ವೈದ್ಯನಾಗಿ ಸೇವೆ ಸಲ್ಲಿಸುತ್ತಿರುವ ನನಗೆ, ನನ್ನ ವೈದ್ಯಕೀಯ ಕೆಲಸದ ಒತ್ತಡದಿಂದ ಕರ್ನಾಟಕ ಸಂಘದ ಕಾರ್ಯಕ್ರಮಗಳನ್ನು ವೀಕ್ಷಿಸಲು ಆಗದಿದ್ದರೂ, ಹಲವು ಸಂದರ್ಭಗಳಲ್ಲಿ ಸಂಘಕ್ಕೆ ಭೇಟಿ ನೀಡಿದ್ದೇನೆ. ಆ ನೆನಪು ನನ್ನಲ್ಲಿ ಈಗಲೂ ಇದೆ. ಆದ್ದರಿಂದ ನಾನೋರ್ವ ಕನ್ನಡಿಗನಾಗಿ ಕರ್ನಾಟಕ ಸಂಘದ ಬಗ್ಗೆ ಅಪಾರವಾದ ಗೌರವ ಇದೆ. ನಮ್ಮಲ್ಲಿ ಎಷ್ಟು ಶ್ರೀಮಂತಿಕೆ ಇದ್ದರೂ,ನಾವು ನಮ್ಮ ನೆಲದ



ಭಾಷೆ,ಸಂಸ್ಕೃತಿಯನ್ನು ಎಂದೂ ಮರೆಯ ಬಾರದು. ಇಂತಹ ಘನ ಕೆಲಸಕ್ಕೆ ತನ್ನಿಂದಾದ ಸಹಕಾರವನ್ನು ನೀಡುತ್ತೇನೆ. ಎಂದು ಕುಂದಾಪುರ ತಾಲೂಕಿನ ಹೆಸರಾಂತ ಮೂಡುಗುಂದ ಮನೆಯ ಪ್ರಸಿದ್ಧ ವೈದ್ಯ ಮತ್ತು ಶಸ್ತ್ರ ಚಿಕಿತ್ಸಕರಾದ ಡಾಕ್ಟರ್ ಬೆಳ್ಳೂರು ಸುಂದರ್ ಶೆಟ್ಟಿ (ಎಂ.ಬಿ.ಬಿ.ಎಸ್) ಹೇಳಿದರು.

ಜುಲೈ 23ರ ಗುರುವಾರದಂದು ಮುಂಬಯಿ ಕನ್ನಡಿಗರ ಪ್ರಾತಿನಿಧಿಕ ಸಂಸ್ಥೆ, ಸುವರ್ಣ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಕರ್ನಾಟಕ ಸಂಘದ ನೂತನ ಸಾಂಸ್ಕೃತಿಕ ಸಮುಚ್ಚಯದ ಕಾಮಗಾರಿಯನ್ನು ವೀಕ್ಷಿಸಿ ಅವರು ಮಾತನಾಡಿದರು. ಅವರನ್ನು ಸಂಘದ ಅಧ್ಯಕ್ಷ ಡಾ ಭರತ್ ಕುಮಾರ್ ಪೊಲಿಪು, ಗೌ ಕಾರ್ಯದರ್ಶಿ ಓಂದಾಸ್ ಕಣ್ಣಂಗಾರ್ ಶಾಲು ಹೊದಿಸಿ,ಪುಷ್ಪಗುಚ್ಛ ನೀಡಿ ಗೌರವಿಸಿದರು.

ಈ ಸಂದರ್ಭದಲ್ಲಿ ಉಪಸ್ಥಿತರಿದ್ದ ಕೆ. ರಾಜ್ ಶೆಟ್ಟಿ ಅವರು ಸಂಘದ ಯೋಜನೆಯ ಕಿರುಹೊತ್ತಿಗೆಯನ್ನು ಡಾ. ಸುಂದರ್ ಶೆಟ್ಟಿಯವರಿಗೆ ನೀಡಿ, ಕರ್ನಾಟಕ ಸಂಘದ ಕಾರ್ಯ ಸಿದ್ಧಿಯಿಂದ ಪ್ರಭಾವಿತನಾಗಿರುವ ನಾನು,ಸಂಘಕ್ಕೆ ಏನಾದರೂ ಮಾಡಬೇಕೆನ್ನುವ ಇಚ್ಛೆಯಿಂದ ನನ್ನ ಸಹಕಾರವನ್ನು ನೀಡುತ್ತಿದ್ದೇನೆ ಎಂದರು. ಖ್ಯಾತ ನ್ಯಾಯವಾದಿ ಶಿವಪ್ರಸಾದ್ ಶೆಟ್ಟಿಯವರು ಉಪಸ್ಥಿತರಿದ್ದರು.

ಬಿ. ರವಿಕುಮಾರ್ ಭೇಟಿ

ಕರ್ನಾಟಕ ಸಂಘ ಮುಂಬಯಿ, ನೂತನ ಸಾಂಸ್ಕೃತಿಕ ಸಮುಚ್ಛಯದ ಕಾಮಗಾರಿಯ ವೀಕ್ಷಣೆಗೆ ಬಂದ ಗಣ್ಯರು ಕರ್ನಾಟಕ ಸಂಘದ ನೂತನ ಸಾಂಸ್ಕೃತಿಕ ಸಮುಚ್ಛಯದ ಕಾಮಗಾರಿಯನ್ನು ವೀಕ್ಷಿಸಿ ವಿಸ್ಮಯ ಹಾಗೂ ಸಂತಸವಾಯಿತು. ಮುಂಬಯಿ ಮಹಾನಗರದಲ್ಲಿ ಸಂಘಕ್ಕೆ ಇಂತಹ ಘನವಾದ ಕಟ್ಟಡವು ಅತ್ಯವಶ್ಯಕವಾಗಿ ಬೇಕಾಗಿದೆ. ಕಳೆದ ಎರಡೂವರೆ ದಶಕಗಳ ಹಿಂದೆ ಕರ್ನಾಟಕ ಸಂಘದ ಕನ್ನಡಪರ ಚಟುವಟಿಕೆಗಳಲ್ಲಿ ನಿರಂತರವಾಗಿ ಭಾಗವಹಿಸಿದ್ದ ನನಗೆ ಆ ಖುಷಿಯನ್ನು ಹೇಳಿ ಕೊಳ್ಳಲಾಗದು. ಇಲ್ಲಿ ಜರಗುತ್ತಿದ್ದ ಯಕ್ಷಗಾನದ ಪ್ರದರ್ಶನಗಳನ್ನು ಮತ್ತು ಇತರ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಕಂಡು ಮೈ ಮರೆಯುತ್ತಿದ್ದೆ. ಕರ್ನಾಟಕ ಸಂಘದ ಗ್ರಂಥಾಲಯದಿಂದಾಗಿ ಅಪಾರವಾದ ಸಾಹಿತ್ಯ ಕೃತಿಗಳನ್ನು ಓದುವ ಅವಕಾಶ ಸಿಕ್ಕಿದ್ದು ನನ್ನ ಪುಣ್ಯ ಎಂದು ಭಾವಿಸಿದ್ದೇನೆ. ಮುಂಬಯಿ ಯಂತಹ ಬಹುಭಾಷಿಕ ನಗರದಲ್ಲಿ ಕನ್ನಡಿಗರಿಗೆ ಕರ್ನಾಟಕ ಸಂಘದಿಂದಾಗಿ ಕನ್ನಡ ಭಾಷೆ, ಸಾಹಿತ್ಯ ಹಾಗೂ ಸಂಸ್ಕೃತಿಯ ಜೀವಾಳಾದ ಕೊರತೆಯನ್ನು ನೀಗಿಸುತ್ತಿದೆ. ಇದು ಕನ್ನಡಿಗರೆಲ್ಲರಿಗೂ



ಅಭಿಮಾನದ ಸಂಗತಿಯಾಗಿದೆ. ಬ್ಯಾಂಕ್ ವೃತ್ತಿಯಲ್ಲಿದ್ದ ನನಗೆ ವರ್ಗಾವಣೆಯಿಂದಾಗಿ ಸಂಘದ ಸಂಪರ್ಕ ಕಡಿದು ಹೋಗಿತ್ತು. ಇಂದು ಮತ್ತೆ ಸಂಘದ ನೂತನ ಸಾಂಸ್ಕೃತಿಕ ಸಮುಚ್ಛಯದ ಬಗ್ಗೆ ಅರಿಯುವ ಅವಕಾಶ ನನಗೆ ಲಭಿಸಿದ್ದು, ಈ ಯೋಜನೆಗೆ ಓರ್ವ ಕನ್ನಡಿಗನಾಗಿ ಸಹಕಾರವನ್ನು ನೀಡುವುದು ನನ್ನ ಕರ್ತವ್ಯವಾಗಿದೆ. ಎಂದು ಆರ್ಥಿಕ ತಜ್ಞ, ನಿವೃತ್ತ ಸಹಾಯಕ ಪ್ರಧಾನ ವ್ಯವಸ್ಥಾಪಕ ಭಾರತೀಯ ಸ್ಟೇಟ್ ಬ್ಯಾಂಕ್, ಮಾಜಿ ಆರ್ಥಿಕ ಸಲಹೆಗಾರ ಕೋಟಕ್ ಬ್ಯಾಂಕ್ ಮತ್ತು ಇಂಡಸ್ಲೆಂಡ್ ಬ್ಯಾಂಕ್ ಹಾಗೂ ಸಾಹಿತ್ಯ ಪ್ರೇಮಿಯೂ ಆಗಿರುವ ಬಿ. ರವಿಕುಮಾರ್ ಹೇಳಿದರು.

ಜೂನ್ 20ರ ಶನಿವಾರದಂದು ಮುಂಬಯಿ ಕನ್ನಡಿಗರ ಪ್ರಾತಿನಿಧಿಕ ಸಂಸ್ಥೆ, ಸುವರ್ಣ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಕರ್ನಾಟಕ ಸಂಘದ ನೂತನ ಸಾಂಸ್ಕೃತಿಕ ಸಮುಚ್ಛಯದ ಕಾಮಗಾರಿಯನ್ನು ವೀಕ್ಷಿಸಿ ಅವರು ಮಾತನಾಡಿದರು. ಇನ್ನೋರ್ವ ಗಣ್ಯರಾದ ಉದ್ಯಮಿ, ಸಮಾಜ ಸೇವಕ ಕೆ. ರಾಜ್ ಶೆಟ್ಟಿ ಮಾತನಾಡಿ ಹೊರನಾಡಿನಲ್ಲಿ ಕನ್ನಡಿಗರೆಲ್ಲರನ್ನು ಬೆಸೆಯುವ ದೃಷ್ಟಿಕೋನವನ್ನಿಟ್ಟುಕೊಂಡು ಆಧುನಿಕ ಸೌಲಭ್ಯದೊಂದಿಗೆ ರೂಪು ಗೊಳ್ಳುತ್ತಿರುವ, ಈ ಯೋಜನೆಯು ಕನ್ನಡಿಗರೆಲ್ಲರೂ ಅಭಿಮಾನ ಪಡುವಂತಾಗಿದೆ. ಕರ್ನಾಟಕ ಸಂಘದೊಂದಿಗೆ ನನಗೆ ಭಾವನಾತ್ಮಕ ಸಂಬಂಧ ಇದ್ದು,ಈ ಕೆಲಸಕ್ಕೆ ಪೂರ್ಣ ಪ್ರಮಾಣದಲ್ಲಿ ಬೆಂಬಲವನ್ನು ನೀಡುತ್ತೇನೆ ಎಂದ ಕೆ.ರಾಜ್ ಶೆಟ್ಟಿ, ಶೀಘ್ರ ಗತಿಯಿಂದ ಸಾಗುತ್ತಿರುವ ಈ ಕೆಲಸವು ಅದಷ್ಟು ಬೇಗ ಪೂರ್ಣಗೊಳ್ಳಲಿ ಎಂದು ಹೇಳಿದರು. ಗಣ್ಯರನ್ನು ಕರ್ನಾಟಕ ಸಂಘದ ಗೌ ಕಾರ್ಯದರ್ಶಿ ಓಂದಾಸ್ ಕಣ್ಣಂಗಾರ್ ಶಾಲು ಹೊದಿಸಿ, ಪುಷ್ಪಗುಚ್ಛ ನೀಡಿ ಗೌರವಿಸಿದರು. ಅಲ್ಲದೆ ಯೋಜನೆಯ ಕಿರುಹೊತ್ತಿಗೆಯನ್ನು ಗಣ್ಯರಿಗೆ ನೀಡಲಾಯಿತು.ಸಂಘದ ಸುರೇಶ್ ಕುಂದರ್ ಉಪಸ್ಥಿತರಿದ್ದರು.

ಭಾಸ್ಕರ್ ಶೆಟ್ಟಿ ಭೇಟಿ

ಕರ್ನಾಟಕ ಸಂಘ ಮುಂಬಯಿ ನೂತನ ಸಾಂಸ್ಕೃತಿಕ ಸಮುಚ್ಛಯದ ಕಾಮಗಾರಿಯನ್ನು ವೀಕ್ಷಿಸಿದ ಹೆಸರಾಂತ ಉದ್ಯಮಿ ಭಾಸ್ಕರ್ ಶೆಟ್ಟಿ ಮುಂಬಯಿ ಮಹಾನಗರದಲ್ಲಿ ಕನ್ನಡ ತನವನ್ನು ಜೀವಂತವಾಗಿರಿಸಿದ ಮತ್ತು ಕನ್ನಡ ನಾಡಿನ ಸಂಸ್ಕೃತಿಯನ್ನು ಉಳಿಸಿ ಬೆಳೆಸಿದ ಕರ್ನಾಟಕ ಸಂಘ ನನ್ನ ಹೃದಯಕ್ಕೆ ತುಂಬ ಹತ್ತಿರವಾಗಿದೆ.



80 ರ ದಶಕದಿಂದಲೂ ನನ್ನ ಮೆಚ್ಚಿನ ಯಕ್ಷಗಾನವನ್ನು ಸಂಘದ ವಿಶ್ವೇಶ್ವರಯ್ಯ ಸಭಾಗೃಹದಲ್ಲಿ ನೋಡಿ ಆನಂದ ಪಟ್ಟಿದ್ದೇನೆ. ಆ ದಿನಗಳನ್ನು ಖಂಡಿತಾ ಮರೆಯಲಾರೆ.ಈಗ ಹೊಸತಾಗಿ ರೂಪು ಗೊಳ್ಳುತ್ತಿರುವ ಸಂಘದ ನೂತನ ಸಾಂಸ್ಕೃತಿಕ ಸಮುಚ್ಚಯದ ಕಾಮಗಾರಿಯನ್ನು ನೋಡಿ ತುಂಬ ಸಂತೋಷ ಆಯ್ತು. ಇಲ್ಲಿಯ ಒಳ್ಳೆಯ ಕೆಲಸ ನೋಡಿ,ಇದು ನಮ್ಮದು ಎಂಬ ಭಾವನೆ ಉಂಟಾಗಿದೆ.ಇಲ್ಲಿಯ ಒಂದೊಂದು ಪಿಲ್ಲರ್‌ಗಳನ್ನು ಕಂಡಾಗ ಒಳ್ಳೆಯ ಮನಸ್ಸಿನಿಂದ ಆಗುತ್ತಿರುವ ಕೆಲಸ ಎಂಬ ಅನುಭವವಾಗುತ್ತಿದೆ. ಇಂತಹ ಅರ್ಥಪೂರ್ಣ ಕೆಲಸಕ್ಕೆ ನನ್ನದು ಸಹಕಾರವಿದೆ ಎಂದು ಹೆಸರಾಂತ ಉದ್ಯಮಿ, ಸಮಾಜ ಸೇವಕ, ಯಕ್ಷಗಾನ ಪ್ರೇಮಿ, ಸುಪ್ರೀಂ ಕ್ಯಾಟರರ್ಸ್ ಹಾಸ್ಪಿಟಾಲಿಸ್ ಸರ್ವಿಸ್‌ನ ಮಾಲಕರಾದ ಕುಂದಾಪುರದ ಸಂಸಾಡಿ ಭಾಸ್ಕರ್ ಶೆಟ್ಟಿ ಹೇಳಿದರು.

ಜೂನ್ 27ರ ಶನಿವಾರದಂದು ಮುಂಬಯಿ ಕನ್ನಡಿಗರ ಪ್ರಾತಿನಿಧಿಕ ಸಂಸ್ಥೆ, ಸುವರ್ಣ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಕರ್ನಾಟಕ ಸಂಘದ ನೂತನ ಸಾಂಸ್ಕೃತಿಕ ಸಮುಚ್ಚಯದ ಕಾಮಗಾರಿಯನ್ನು ವೀಕ್ಷಿಸಿ ಅವರು ಮಾತನಾಡಿದರು. ಅವರನ್ನು ಸಂಘದ ಅಧ್ಯಕ್ಷರಾದ ಡಾ. ಭರತ್ ಕುಮಾರ್ ಪೊಲಿಪು, ಗೌ ಕಾರ್ಯದರ್ಶಿ ಓಂದಾಸ್ ಕಣ್ಣಂಗಾರ್ ಪುಷ್ಪಗುಚ್ಛ ನೀಡಿ ಗೌರವಿಸಿದರು.

ಈ ಸಂಧರ್ಭದಲ್ಲಿ ಸಿದ್ದೇಶ್ ಮಾಳವಂಕರ್, ಸಂಘದ ಉಪಾಧ್ಯಕ್ಷರಾದ ಡಾ. ಈಶ್ವರ ಅಲೆವೂರು, ಸಮಿತಿ ಸದಸ್ಯರಾದ ಶ್ರೀಯುತ ಲಕ್ಷ್ಮಣ್ ಪುತ್ರನ್, ಶ್ರೀಮತಿ ಸುಶೀಲಾ ದೇವಾಡಿಗ, ಶ್ರೀಮತಿ ಮಾಲತಿ ಚಂದ್ರಕಾಂತ್ ಉಪಸ್ಥಿತರಿದ್ದರು.

ಡಾ. ಉಷಾ ದೇಸಾಯಿ ಭೇಟಿ

ಪ್ರಖ್ಯಾತ ಕನ್ನಡ ನಾಟಕಕಾರ ಶ್ರೀರಂಗರ ಸುಪುತ್ರಿ ಡಾ. ಉಷಾ ದೇಸಾಯಿ ದಂಪತಿಗಳು ಸಂಘದ ಕಾಮಗಾರಿ ವೀಕ್ಷಣೆಗೆ ಆಗಮಿಸಿದರು. ನಿರ್ಮಾಣದ ಪ್ರಗತಿಯನ್ನು ಕಂಡು ಸಂತೋಷ ವ್ಯಕ್ತಪಡಿಸಿದರು. ಈಗಾಗಲೇ ಸುಮಾರು



10 ಲಕ್ಷ ದೇಣಿಗೆ ನೀಡಿ ಸಹಕರಿಸಿದ ಶ್ರೀಮತಿ ಉಷಾ ದೇಸಾಯಿಯವರು ಇನ್ನೂ ಬೇರೆ ದಾನಿಗಳಿಂದ ನೆರವು ಒದಗಿಸಲು ಪ್ರಯತನಿಸುತ್ತೇನೆ ಎಂದರು. ಅವರನ್ನು ಸಂಘದ ವತಿಯಿಂದ ಸಂಘದ ಅಧ್ಯಕ್ಷರಾದ ಡಾ. ಭರತ್‌ಕುಮಾರ್ ಪೊಲಿಪುರವರು ಗೌರವಿಸಿದರು .ಶ್ರೀ ಸುರೇಶ್ ಕುಂದರ್ ಉಪಸ್ಥಿತರಿದ್ದರು.

ಅಜಿತ್ ಭುರೆ ಭೇಟಿ

ಮರಾಠಿ ನಾಟ್ಯ ಪರಿಷತ್ತ್ ಮಹಾರಾಷ್ಟ್ರ ಇದರ ಅಧ್ಯಕ್ಷರಾದ ಶ್ರೀ ಅಜಿತ್ ಭುರೆಯವರು ಸಂಘಕ್ಕೆ ಭೇಟಿ ನೀಡಿ ಸಂಘದ ನೂತನ ನಿರ್ಮಾಣದ ಯೋಜನೆಯನ್ನು ತಿಳಿದು, ಕಾಮಗಾರಿ ವೀಕ್ಷಿಸಿ ಸಂತೋಷ ವ್ಯಕ್ತ ಪಡಿಸಿದರು. ಈ ಸಂದರ್ಭದಲ್ಲಿ ಕನ್ನಡ ಮತ್ತು ಮರಾಠಿ ರಂಗಭೂಮಿಯ ಅದಾನ – ಪ್ರದಾನದ ಬಗ್ಗೆ ಸುಧೀರ್ಘ



ಚರ್ಚೆ ನೆಡಸಲಾಯಿತು. ಈ ಸಂದರ್ಭದಲ್ಲಿ ಅವರನ್ನು ಸಂಘದ ವತಿಯಿಂದ ಸಂಘದ ಅಧ್ಯಕ್ಷರಾದ ಡಾ. ಭರತ್‌ಕುಮಾರ್ ಪೊಲಿಪು ಮತ್ತು ಗೌ. ಕಾರ್ಯದರ್ಶಿ ಓಂದಾಸ್ ಕಣ್ಣಂಗಾರ್‌ರವರು ಗೌರವಿಸಿದರು. ರಂಗ ಕಲಾವಿದರಾದ ಅವಿನಾಶ್ ಕಾಮತ್, ಶ್ರೀಮತಿ ಅಹಲ್ಯಾ ಬಲ್ಲಾಳ್, ಶ್ರೀ ಮೋಹನ್ ಮಾರ್ನಾಡ್ ಚರ್ಚೆಯಲ್ಲಿ ಭಾಗಬಹಿಸಿದ್ದರು.

ಕಲಾಭಾರತಿ ಕಾರ್ಯಕ್ರಮ

ಕರ್ನಾಟಕ ಸಂಘದ ಕಲಾಭಾರತಿ ಮತ್ತು ದ ಭವಾನಿ ಮಿರ್ಮಿರಾ ಪರಿವಾರ್ ಜಂಟಿಯಾಗಿ ತಾ. 19, ಫೆಬ್ರುವರಿ 2026ರಂದು ಮೈಸೂರು ಅಸೋಸಿಯೇಶನ್‌ನ ಸಭಾಗೃಹದಲ್ಲಿ ದಿ. ಲಕ್ಷ್ಮೀಸುಧೀಂದ್ರ ಅವರ ಹನ್ನೊಂದನೆಯ ಸಂಸ್ಮರಣೆಯ ಪ್ರಯುಕ್ತ ಶಾಸ್ತ್ರೀಯ ಸಂಗೀತ ಕಾರ್ಯಕ್ರಮವನ್ನು ಅಯೋಜಿಸಲಾಗಿತ್ತು. ಶ್ರೀಮತಿ ವಿದುಷಿ ಜುಯಿ





ದಾಯಿಗುಡೆ ಪಾಂಡೆ ಮತ್ತು ವಿದುಷಿ ಸಾನಿಯ ಪಾಟನ್‌ಕರ್, ಕರ್ನಾಟಕ ಸಂಘದ ಪದಾಧಿಕಾರಿಗಳು ಉಪಸ್ಥಿತರಿದ್ದರು. ಅವರು ಗಾಯನ ಪ್ರಸ್ತುತ ಪಡಿಸಿದರು. ಡಾ. ಎಸ್. ಕೆ. ಭವಾನಿಯವರು ಕಾರ್ಯಕ್ರಮವನ್ನು ನಿರ್ವಹಿಸಿದರು.

ಕರ್ನಾಟಕ ಸಂಘಕ್ಕೆ ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಸಹಕರಿಸಿದ ಸಂಘ ಸಂಸ್ಥೆಗಳಿಗೆ, ಕಟ್ಟಡ ನಿಧಿಗೆ ಉದಾರ ದಾನ ನೀಡಿದ ಮಹನೀಯರಿಗೆ ಅನಂತ ಧನ್ಯವಾದಗಳು.

ಕಾರ್ಯಕಾರಿ ಸಮಿತಿಯ ಪರವಾಗಿ,

ಮುಂಬಯಿ
ತಾ. 28-08-2026

ಓಂದಾಸ್ ಕಣ್ಣಂಗಾರ್
ಗೌ. ಕಾರ್ಯದರ್ಶಿ

ಕರ್ನಾಟಕ ಸಂಘ, ಮುಂಬಯಿ

ಕಾರ್ಯಕಾರಿ ಸಮಿತಿ ಸದಸ್ಯರ ಯಾದಿ

ಡಾ. ಭರತ್ ಕುಮಾರ್ ಪೊಲಿಪು
ಅಧ್ಯಕ್ಷರು

ಡಾ. ಈಶ್ವರ ಅಲೆವೂರು
ಉಪಾಧ್ಯಕ್ಷರು

ಓಂದಾಸ್ ಕಣ್ಣಂಗಾರ್
ಗೌ. ಕಾರ್ಯದರ್ಶಿ

ಸುಶೀಲಾ ದೇವಾಡಿಗ
ಗೌ. ಜತೆ ಕಾರ್ಯದರ್ಶಿ

ದಿನೇಶ್ ಕಾಮತ್
ಗೌ. ಕೋಶಾಧಿಕಾರಿ

ಸದಾನಂದ ಜಿ. ಅಮೀನ್
ಗೌ. ಜತೆ ಕೋಶಾಧಿಕಾರಿ

ಸದಸ್ಯರು :

ಮನೋಹರ ಎಂ. ಕೋರಿ
ರಾಘವ ಎಂ.
ವಿಶ್ವೇಶರ ಎನ್. ಮೇಟಿ
ಮಾಲತಿ ಚಂದ್ರಕಾಂತ್
ಪದ್ಮನಾಭ ಸಸಿಹಿತ್ಲು
ಎನ್. ಬಿ. ಸಾವಳ್‌ಸಂಗ್
ಲಕ್ಷ್ಮಣ ಎಂ. ಪುತ್ರನ್
ಮಲ್ಲಿಕಾರ್ಜುನ ಎಸ್. ಬಿರಾದಾರ್
ಪ್ರಭಾಕರ ಶೆಟ್ಟಿ
ಕೀರ್ತನಾ ರವಿ

ನೂತನ ಸಾಂಸ್ಕೃತಿಕ ಸಮುಚ್ಚಯ
ದೇಣಿಗೆ ನೀಡಲು ವಿನಂತಿ

ಕರ್ನಾಟಕ ಸಂಘದ ನೂತನ ಸಾಂಸ್ಕೃತಿಕ ಸಮುಚ್ಚಯಕ್ಕೆ ಕರ್ನಾಟಕ ಸಂಘದ ಸದಸ್ಯರು, ಕನ್ನಡದ ಅಭಿಮಾನಿಗಳು, ಹಿತೈಷಿಗಳು, ದಾನಿಗಳು ನೆರವು ನೀಡಿ ಸಹಕರಿಸಬೇಕೆಂದು ವಿನಂತಿ.

ದೇಣಿಗೆಯನ್ನು ಚೆಕ್ ಮೂಲಕ ಸಂಘದ ಕಾರ್ಯಾಲಯಕ್ಕೆ ತಲಪಿಸಬಹುದು. **NEFT** ಮೂಲಕ ಕಳುಹಿಸಬಹುದು.

ಅತ್ಯಂತ ದೊಡ್ಡ ಮೊತ್ತ ನೀಡಿದ ದಾನಿಗಳಿಗೆ ಅವರು ಸೂಚಿಸಿದ ಹೆಸರನ್ನು ಸಭಾಗೃಹ, ಕೊಠಡಿಗಳಿಗೆ ನಾಮಕರಣ ಮಾಡಲು ಸಾಧ್ಯವಿದೆ. ದೇಣಿಗೆಗೆ ಆದಾಯಕರ **80 G** ವಿನಾಯಿತಿ ಇದೆ. ನಮ್ಮ ಕೆನರಾ ಬ್ಯಾಂಕ್ ಖಾತೆ ವಿವರ ಹೀಗಿದೆ;

'Karnataka Sangha Building Redevelopment Account''

CANARA BANK, A/C No: **0131101020975**

IFSC CODE : CNRB0000132 MICR CODE : 400015043



ASHWAJITH ASSOCIATES
CHARTERED ACCOUNTANTS
3rd Floor,14/16, Bhandari Cross Lane
Mandvi
Mumbai - 400 003
E-mail: ashwajith@ashwajith.in

AUDIT REPORT

To the Members of Karnataka Sangha, Mumbai

We have audited the annexed Balance Sheet of KARNATAKA SANGHA, MUMBAIas at 31st March, 2026 and Income & Expenditure Account for the period ended on that date. These financial statements are responsibility of Board of Trustees. Our responsibility is to express an opinion on these financial statements based on our Audit.

We conducted our audit in accordance with generally accepted auditing standards in India. These standards require that we plan and perform the audit to obtain reasonable assurance whether the financial statements are free of material misstatements. An audit includes examination on test check basis evidence supporting the amount and disclosures in the financial statement. An audit also include assessing the accounting principles used and significant estimates made by the management as well as evaluating the overall financial presentation. We believe that the audit evidence we have obtained is sufficient and appropriate to provide a basis for our audit opinion on the financial statements.

Subject to above we report as under -

1. We have obtained all the information and explanation which to the best of our knowledge and belief were necessary for the purpose of audit.
2. In our opinion, proper books of account have been kept by the above named trust, so far as appears from our examination of the books.
3. The Balance Sheet and the Income and Expenditure Account dealt with by this report are in agreement with the books of account maintained by the said trust.
4. In our opinion and to the best of our knowledge and according to information and explanation given to us, the said accounts read together with the Accounting Policies and notes forming part of accounts, give a true and fair view:-
   a. In the case of Balance Sheet, of the state of affairs of the above named trust as at 31st March, 2026.

      And

   b. In the case of the Income and Expenditure account, of the deficit for the accounting year ending on 31st March, 2026

FOR **ASHWAJITH ASSOCIATES**
Chartered Accountants
FRN: 113853W
ASHWAJITH
(Proprietor)
Membership No. 200209
UDIN:26200209BHOVUQ8567

Place : Mumbai
Dated : 29th May 2026

KARNATAKA

BALANCE SHEET AS

PREVIOUS YEAR 31-Mar-2025	LIABILITIES		CURRENT YEAR 31-Mar-2026
	RESERVE FUND:		
89,11,995	Opening balance		89,11,995
	BUILDING FUND:		
2,45,96,232	Opening balance		2,45,96,232
	REDEVELOPMENT FUND		
3,94,20,331	Opening balance	4,26,41,832	
	Additions during the year:		
32,21,501	Donation received	42,80,965	4,69,22,797
36,47,809	**OTHER SPECIFIC FUND:** ***(As per Annexure A)***		37,15,525
	DEPOSITS:		
4,24,678	Auditorium & Hall Deposits	4,24,678	
1,18,732	Library & Mobile Library Deposit	1,18,732	5,43,410
	CURRENT LIABILITIES:		
44,23,590	Retention money from Contractors	50,09,765	
50,000	Outstanding expenses	25,000	
16,21,420	Sundry Creditors for expenses	6,43,365	
2,17,951	Provision for Gratuity	2,29,238	
81,494	TDS payable	72,460	
9,421	Other liabilities	9,421	59,89,249
	LOANS LIABILITY		
3,75,00,000	Arundati M Kori	4,00,00,000	
9,20,90,088	Karnataka Bank Ltd.	11,94,57,035	15,94,57,035
	INCOME & EXPENDITURE A/C :		
1,98,20,097	Opening Balance	1,89,91,575	
-8,28,522	Less: Deficit during the year	-6,08,815	1,83,82,760
23,53,26,817			**26,85,19,003**

As per our report of even date attached

For **ASHWAJITH ASSOCIATES**
(Chartered Accountants)
FRN:113853W
Sd/-
(Proprietor)
M. No. 200209
UDIN:26200209BHOVUQ8567

Date : 29-05-2026
Place : Mumbai

SANGHA

ON 31ST MARCH, 2026

PREVIOUS YEAR 31-Mar-2025	ASSETS		CURRENT YEAR 31-Mar-2026
	FIXED ASSETS:		
	(as per Schedule B)		
6,32,595	Gross Block	6,32,595	
-5,67,018	Less : Depreciation	-5,72,574	
65,577	Net Block		60,021
19,88,13,461	Capital Work-in-Progress		22,92,22,689
	INVESTMENTS:		
100	1 Share in Karnataka Co-op. Housing Society Ltd.		100
9,80,070	980070 Equity Warrants of Rs.1/- each in Unity Small / finance Bank Ltd.		9,80,070
39,20,290	392029 Perpetual Non-cumulative Preference Shares of Unity Small Finance Bank Ltd. of Rs. 10 each		39,20,290
	General and other Specific Fund Investment:		
10,00,000	Fixed deposit with Bank *(As per Annexure C)*	10,00,000	
8,050	Interest accrued on above Fixed deposit	7,344	10,07,344
	DEPOSITS & ADVANCES:		
	Staff Loans	20,000	
2,29,920	Deposit with B E S T	2,29,920	
82,48,217	Advance to Contractor/Supplier	59,12,352	61,62,272
	CASH & BANK BALANCE:		
1,131	Cash in hand	7,705	
7,853	Savings account with Canara Bank (3427 & 1100)	3,534	
1,03,872	Savings account with Canara Bank (Redevelopment)	2,292	
3,67,734	Savings account with Karnataka Bank Ltd	2,06,200	
36,849	Savings account with Unity Small Finance Bank Ltd	-	2,19,731
	SUNDRY RECEIVABLE:		
23,86,582	TDS Receivable	23,93,354	
1,91,57,111	Goods & Service tax set off	2,45,53,132	2,69,46,486
23,53,26,817			**26,85,19,003**

For KARNATAKA SANGHA

Sd/-	Sd/-	Sd/-
DR. BHARATH KUMAR POLIPU	**OMDAS KANNANGAR**	**DINESH KAMATH**
President	*Hon. Secretary*	*Hon. Treasurer*

KARNATAKA

INCOME & EXPENDITURE ACCOUNT

PREVIOUS YEAR 2024-2025	EXPENDITURE	CURRENT YEAR 2025-2026
-	To Rent, Rates & Taxes (Including water charges)	1,140
2,500	To Professional Tax (Sangha)	2,500
97,000	To Professional charges	1,37,000
25,000	To Audit Fees	25,000
22,230	To Electricity Expenses (Net)	19,358
4,75,975	To Salaries, Bonus & Gratuity	4,48,975
16,005	To Staff Welfare expenses	13,093
8,549	To Repairs & Maintenance (Annexure D)	.10,205
37,500	To Security charges	-
28,984	To Printing & Stationary	35,631
363	To Postage & Telegraph	373
-	To Telephone & Inter Communication	9,744
.46,586	To Conveyance Expenses	20,167
67,947	To Miscellaneous Expenses	29,476
76,915	To AGM / Meeting Expenses	39,360
45,847	To Bank charges / Interest on Bank Overdraft	17,487
-	To Interest on TDS	920
8,815	To Depreciation	5,556
	To **Expenditure on the object of The Trust:**	
5,445	Information Literary Wing & Educational	-
-	Cultural Program Expenses	-
9,65,661	**Total expenditure**	8**,15,985**
-	To Excess of income over expenditure	-
9,65,661		**8,15,985**

As per our report of even date attached

For **ASHWAJITH ASSOCIATES**
(Chartered Accountants)
FRN:113853W
Sd/-
(Proprietor)
M. No. 200209
UDIN:26200209BHOVUQ8567

Date : 29-05-2026
Place : Mumbai

SANGHA

FOR THE YEAR ENDED 31.03.2026

PREVIOUS YEAR 2024-2025	INCOME	CURRENT YEAR 2025-2026
-	By Cultural Program Donation	1,13,725
1,01,855	By Interest received from Bank	58,163
35,282	By Dividend received	35,282
2	By Miscellaneous Income	-
1,37,139	**Total Income**	**2,07,170**
8,28,522	By Excess of Expenditure over income	6,08,815
9,65,661		**8,15,985**

For KARNATAKA SANGHA

Sd/-	Sd/-	Sd/-
DR. BHARATH KUMAR POLIPU	**OMDAS KANNANGAR**	**DINESH KAMATH**
President	*Hon. Secretary*	*Hon. Treasurer*

KARNATAKA SANGHA

DETAILS OF FUND ACCCOUNT FOR THE YEAR ENDING 31ST MARCH 2026

PREVIOUS YEAR 2024-2025	PARTICULARS	CURRENT YEAR 2025-2026
	ANNEXURE - A	
	Other Specific fund	
1,44,767	A S K Rao Endowment Fund	1,47,438
1,26,995	Dr. M Achutha R Kudva Endowment Fund.	1,29,338
19,042	Dr. Mohan Abhinandan Endowment Fund	19,393
13,967	Dr. P G Mudgal Memorial Fund	14,225
2,98,406	Dr. Suneetha Shetty Endowment Fund	3,03,912
22,22,203	Education Fund	22,63,205
1,26,991	Guru Sangama M Kori Endowment Fund	1,29,334
63,486	Kalabharati Endowment Fund	64,657
25,392	Late Bharati Kodlekar Memorial Award Fund	25,861
1,04,711	Marvanghodi Rukmini B Gowda Endowment Fund	1,07,054
12,701	Pejawar Sadashiv Rao Endowment Fund	12,935
3,809	Ramchandra Uchil Felicitation Comm. Endowment Fund	3,879
2,69,206	Sadanand Suvarna Endowment Fund	2,74,173
6,351	Siddharamaya Patil Felicitation comm. Endowment Fund	6,468
1,84,388	Varadaraja Adya Memorial Award Fund	1,87,790
25,394	Vyasarao Ballal Endowment Fund	25,863
36,47,809		**37,15,525**
	ANNEXURE - C	
	Reserve Fund & Other Investment	
	Fixed Deposit in	
10,00,000.00	Canara Bank	10,00,000.00
10,00,000.00		**10,00,000.00**

As per our report of even date

For **ASHWAJITH ASSOCIATES**
(Chartered Accountants)
FRN:113853W

Sd/-
ASHWAJITH
(Proprietor)
M. No. 200209
UUDIN:26200209BHOVUQ8567

For KARNATAKA SANGHA

Sd/-	Sd/-	Sd/-
DR. BHARATH KUMAR POLIPU	**OMDAS KANNANGAR**	**DINESH KAMATH**
President	*Hon. Secretary*	*Hon. Treasurer*

Date : 29-05-2026
Place : Mumbai

KARNATAKA SANGHA

ANNEXURE - B

Fixed Assets

SCHEDULE FORMING PART OF BALANCE SHEET AS ON 31ST MARCH 2026

		GROSS BLOCK				DEPRECIATION				NET BLOCK	
PARTICULARS	Rate of Dep	As on 31-03-25	Addit-ons	Deduction	As on 31-03-2026	Upto 31-03-2025	For the year	Deduction	Upto 31-03-2026	As on 31-03-2026	As on 31-03-2025
Land	0%	45,680	-	-	45,680	-	-	-	-	45,680	45,680
Adya & Vishveshvaraya Bust	10%	82,000	-	-	82,000	79,948	205	-	80,153	1,847	2,052
Furniture & Fixtures	10%	11,800	-	-	11,800	5,843	596	-	6,439	5,361	5,957
Computer	40%	4,93,115	-	-	4,93,115	4,81,227	4,755	-	4,85,982	7,133	11,888
		6,32,595	**-**	**-**	**6,32,595**	**5,67,018**	**5,556**	**-**	**5,72,574**	**60,021**	**65,577**
Previous year		**6,32,595**	**-**	**-**	**6,32,595**	**5,58,203**	**8,815**	**-**	**5,67,018**	**65,577**	

Date : 29-05-2026
Place : Mumbai

For KARNATAKA SANGHA

Sd/-
ASHWAJITH ASSOCIATES
Chartered Accountants
FRN:113853W
M. No. 200209
UDIN:26200209BHOVUQ8567

Sd/-
DR. BHARATH KUMAR POLIPU
President

Sd/-
OMDAS KANNANGAR
Hon. Secretary

Sd/-
DINESH KAMATH
Hon. Treasurer

KARNATAKA SANGHA

ANNEXURERS FORMING PART OF THE ACCOUNTS

PREVIOUS YEAR 2024-2025	PARTICULARS	CURRENT YEAR 2025-2026
	ANNEXURE - D	
	REPAIRS & MAINTENANCE	
4,800	Computer	9,000
3,749	Office equipment	1,205
8,549		**10,205**

As per our report of even date

For **ASHWAJITH ASSOCIATES**

(Chartered Accountants)

FRN:113853W

For KARNATAKA SANGHA

Sd/-	Sd/-	Sd/-	Sd/-
ASHWAJITH	**DR. BHARATH KUMAR POLIPU**	**OMDAS KANNANGAR**	**DINESH KAMATH**
(Proprietor)	*President*	*Hon. Secretary*	*Hon. Treasurer*

M. No. 200209

UUDIN:26200209BHOVUQ8567

Date : 29-05-2026

Place : Mumbai

KARNATAKA SANGHA

ANNUAL ACCOUNTS 2025-2026

SIGNIFICANT ACCOUNTING POLICIES

ACCOUNTING CONVENTION

The Accounts are prepared under historical cost convention.

REVENUE RECOGNITION

Expenses and Income considered payable and receivable respectively are accounted for on accrual basis when no significant uncertainty as to determination or realization exists.

FIXED ASSETS

Fixed Assets are stated at historical cost less depreciation, the changes in rates in the Income Tax Rules are duly incorporated. Cost comprises purchase price and attributable costs.

DEFERRED REVENUE EXPENDITURE

Repairs of enduring nature were the benefit is spread for longer periods are classified as Deferred Revenue Expenses. 1/5 of the same is written off each year.

DEPRECIATION

Depreciation on Fixed Assets has been provided on Written Down value Method at the rates as prescribed under the Income Tax Rules.

INVESTMENTS

Investments are valued at cost

SPECIFIC FUNDS INVESTMENTS:

The specified funds and Reserve funds are collectively invested as per the bye-laws of the Trust. The income from all these funds are shown as income of the Trust and expenditure is shown as the expenditure on the objects of trust.

BUILDING FUNDS INVESTMENTS:

Building fund investment is invested separately and the Interest accrued thereon is added to the Fund.

CURRENT ASSETS

The current assets are considered good and recoverable by the Sangha.

NOTES ON ACCOUNTS.

1. Previous year figures have been re grouped and reclassified wherever necessary to make thein comparable with the Current year' s figures.
2. During the year, Karnataka Sangha (Sangha) has incurred an expenditure of Rs.3,04,09,228/- (P.Y.Rs.1,74,28,731/-) towards the Redevelopment Expenses of the auditorium premises situated at Matunga, Mumbai- 400016. Total capital work in progress as March 2026 was Rs.22,92,22,689/- (P.Y.Rs.19,88,13,461/-)
3. During the year, the Sangha has availed further disbursement Of Rs- 1,38,45,000 (Previous Year: Rs. 48,00,000) against the term loan Of Rs. 12,00,00,000 sanctioned by Karnataka Bank Ltd, Sion (East) Branch, for reconstruction Of the auditorium situated at Matunga (East), Mumbai - 400016. The original tenor of the loan was 120 months, including a gestation period of 18 months, which has subsequently been amended to 90 months total tenor and gestation period of 36 months. The loan is 'secured by equitable mortgage Over non-agricultural land bearing Final Plot No. 262 ofTPS-IIIcorresponding to C.S. NO. 2/545, New Survey No. 1/157, admeasuring 1,269.30 sq. metres, owned by the Karnataka Sangha, together with the building to be constructed thereon. Interest liability accrued for the year amounting to Rs. 1,35,21,948 (Previous Year: Rs.1,01,94,300 being covered under the gestation period, has been capitalised by adding the Same to the principal outstanding under the loan account. Consequently, the total loan outstanding to Karnataka Bank Ltd. as at 31st March 2026 stood at Rs. 11,94,57,036 (Previous Year: RS.9,20,90,088).
4. In order to meet financial exigencies arising out of payment obligations towards progress linked Running Account (RA) bills in respect of the ongoing redevelopment project, the Trust has, during the previous financial years, obtained interest-free, temporary, refundable unsecured loans from Mrs. Arundati M. Kori on various dates.
   During the year under review, the Trust has received additional loan of Rs.25,00,000/-
   (Previous Year: Rs.50,00,000/-). The aggregate outstanding balance of such interest-free, temporary, refundable unsecured loan as at 31st March 2026 amounts to Rs.4,00,00,000/-
   (Previous Year: Rs. 3,75,00,000/- Mrs. Arundati M, Kori is the spouse of one of the former Presidents of the Trust, who is presently serving as a member ofthe Managing Committee.
   Accordingly, the above loans are disclosed as related party transactions, and have been advanced and utilised solely for the purposes Of the Trust's ongoing redevelopment project. The said loan is unsecured, temporary; refundable on demand, and carries no interest or other monetary consideration. Based on the facts presently available, no part of the income or property of the Trust appears to 'have been applied for the benefit of the lender, and the borrowing was stated to have been used only for the purposes of the Trust's redevelopment project
5. The Income Tax appeal filed by the Sangha against the order of Income tax assessment for AY 2015-16 demanding Rs.4,64,670/- is pending for hearing.
6. During the year under consideration, the Trust had duly filed applications before' theCommissioner of Income Tax (Exemptions); Mumbai, seeking renewal of registration under Section 12A and approval under Section SOG Of the Income-tax Act, 1961 within the prescribed timelines, However, the said applications were rejected by the department on technical grounds. Aggrieved by the rejection, the Trust has filed an application before the concerned authority requesting recall of the rejection orders. Simultaneously, the Trust has also preferred appeals before the Hon'ble Income Tax Appellate Tribunal, Mumbai, challenging the said orders. The matter is currently pending adjudication, and the appeals are yet to be listed for hearing before the Hon'ble ITAT. As at the reporting date, the matter is sub judice and the appeals are pending adjudication, pending final outcome, no adjustments have been made to the accompanying financial statements in this regard.
7. During the previous years the GST department has rejected refund of GST ITC credits. However GST department has submitted an advance ruling application to the prescribed authorities in FORM-GST-RFD-09 dated 5th April 2024, for an appropriate direction/order regarding Input Tax Credit (ITC) refund of ITC balance that is currently held in Sangha's electronic ledger account. However, as informed to us, the GST department is yet to receive any feedback or reply regarding Sangha's eligibility for the refund claim from GST Advance Ruling Authority.
8. The Sangha is contingently liable to the extent of Rs.10,00,000/- in respect of Bank Guarantee issued to Brihan Mumbai Municipal Corporation,

For **ASHWAJITH ASSOCIATES** **For KARNATAKA SANGHA**

(Chartered Accountants)
FRN:113853W

Sd/-	Sd/-	Sd/-	Sd/-
ASHWAJITH	**DR. BHARATH KUMAR POLIPU**	**OMDAS KANNANGAR**	**DINESH KAMATH**
(Proprietor)	*President*	*Hon. Secretary*	*Hon. Treasurer*

Membership No. 200209
Place : Mumbai
UDIN : UUDIN:26200209BHOVUQ8567
Dated : 29-05-2026

PRESIDENTS OF KARNATAKA SANGHA

Late Shri B. D. Belvi	1933 - 1934
Late Shri N. M. Hungund	1934 - 1935
Late Smt. Seetabai Annigeri	1935 - 1936
Late Shri K. H. Kabbur	1936 - 1937
Late Shri B. D. Belvi	1937 - 1938
Late Shri S. B. Jathar	1938 - 1939
Late Shri G. R. Madabhavi	1939 - 1942
Late Shri S. R. Joshi	1942 - 1943
Late Shri Justice N. S. Lokur	1943 - 1947
Late Shri Justice R. A. Jahagirdar	1947 - 1949
Late Shri V. S. Swadi	1949 - 1951
Late Shri Justice B. M. Kalagate	1951 - 1953
Late Shri R. S. Hukerikar	1953 - 1956
Late Shri A. K. Hafizka	1956 - 1969
Late Shri Varadaraja Adya	1969 - 1988
Late Shri Sadanand A. Shetty	1988 - 1996
Late Shri K. Jayaram Alva	1996 - 2001
Late Shri Ravi R. Anchan	2001 - 2004
Shri Manohar M. Kori	2004 - 2010
Dr. G. D. Joshi	2010 - 2013
Late Shri P. G. Burde	2013 - 2016
Shri Manohar M. Kori	2016 - 2023
Dr. Bharath Kumar Polipu	2023 -

ಕರ್ನಾಟಕ ಸಂಘ ಮುಂಬಯಿ

Karnataka Sangha Mumbai

(ಸುವರ್ಣ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ)

(Regd. under the Societies Registration Act 1860 & Bombay Public Trust Act. 1950)
F. P. No. 262, C. S. M. Marg, Matunga (West), Mumbai - 400 016.



PROPOSED BUILDING

PRINT ART CORPORATION, Mumbai * 82860 65027